ವಿಜಯಪುರ | ಸಂಪುಟ 01 | ಸಂಚಿಕೆ 294 | ಪುಟ 4 | ₹ 3.00

https://udayarashminews.com

udayarashmi 7026028778


# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಗುರುವಾರ, ಜನವರಿ 18, 2024



"ಶರಣರ ಆಚರಣೆಗಳು ಯಾವುದೇ ಒಂದು ಜಾತಿ, ಜನಾಂಗ, ವರ್ಗಕ್ಕೆ ಸೀಮಿತವಾಗಿಲ್ಲ. ಮಹಾತ್ಮರ ಸಂದೇಶಗಳು, ಪವಾಡಗಳು ಮನುಕುಲ ಸರಿಯಾದ ದಾರಿಯಲ್ಲಿ ನಡೆಯುವುದಕ್ಕೆ ದಾರಿ ದೀಪವಾಗುತ್ತವೆ."

– ಯಶವಂತರಾಯಗೌಡ ಪಾಟೀಲ

ಶಾಸಕರು, ಇಂಡಿ


## ಸಿಎಂ ಪುತ್ರ ಡಾ.ಯತೀಂದ್ರ ಅವರ ಹೇಳಿಕೆಗೆ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ!

# ಸಿಎಂ ನೇತೃತ್ವದಲ್ಲೇ ಲೋಕಸಭೆ ಚುನಾವಣೆ

## ಡಿಸಿಎಂ ಡಿ.ಕೆ.ಶಿವಕುಮಾರ ಸ್ಪಷ್ಟನೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲೇ ಲೋಕಸಭೆ ಚುನಾವಣೆಯನ್ನು ಎದು–ರಿಸುತ್ತೇವೆ. ಈ ಬಗ್ಗೆ ಯಾವುದೇ ಅನುಮಾನ ಬೇಡ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಬುಧವಾರ ಹೇಳಿದ್ದಾರೆ.

ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅತಿ ಹೆಚ್ಚು ಸ್ಥಾನ ಗಳಿಸಿದರೆ ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ಸಿಎಂ ಪುತ್ರ ಯತೀಂದ್ರ ಅವರು ಹೇಳಿದ್ದು, ಈ ಹೇಳಿಕೆ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದೆ.



ಈ ಬಗ್ಗೆ ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್ ಅವರು, ಸಿಎಂ ಸಿದ್ದರಾಮಯ್ಯ ನಾಯಕತ್ವದಲ್ಲೇ ಚುನಾವಣೆ ನಡೆಯುತ್ತೆ. ಅದರಲ್ಲಿ ಅನುಮಾನ ಬೇಡ ಎಂದರು.

ನಮ್ಮ ಸರ್ಕಾರ ಬಲಿಷ್ಠವಾಗಿದೆ. ಅದನ್ನು ಅಲುಗಾಡಿಸಲು ಯಾ–ರಿಂದಲೂ ಸಾಧ್ಯವಿಲ್ಲ. ಸಿದ್ದರಾಮಯ್ಯ ನಮ್ಮ ರಾಜ್ಯದ ಮುಖ್ಯಮಂತ್ರಿ. ನಾನು ಕೆಪಿಸಿಸಿ ಅಧ್ಯಕ್ಷನಾಗಿದ್ದೇನೆ. ನಾವಿಬ್ಬರು ಸೇರಿ ಒಟ್ಟಿಗೆ ಚುನಾವಣೆ ಮಾಡುತ್ತೇವೆ. ಆದ್ರೆ, ಅವರ ನಾಯಕತ್ವದಲ್ಲೇ ಚುನಾವಣೆ ನಡೆಯುತ್ತೆ. ಅದರಲ್ಲಿ ಯಾವುದೇ ಅನುಮಾನ ಬೇಡ ಎಂದು ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ 5 ವರ್ಷ ಸಿಎಂ ಹೇಳಿಕೆ ಪ್ರತಿಕ್ರಿಯಿಸಿದ ಡಿಕೆಶಿ, ಆಸೆ ಪಡುವುದು, ಹೇಳೋದು, ಜನರಿಗೆ ಮನವಿ ಮಾಡುವುದು ಸಾಮಾನ್ಯ. ನಾನು ನನ್ನೂರಿಗೆ ಹೋದಾಗ ನನಗೆ ಶಕ್ತಿ ಕೊಡಿ ಎಂದು ಕೇಳುತ್ತೇನೆ. ಅದು ಸ್ವಾಭಾವಿಕ, ಬೇರೆ ರೀತಿ ಯಾಕೆ ಟ್ವಿಸ್ಟ್ ಮಾಡಬೇಕು. ಯತೀಂದ್ರ ಸೂಕ್ಷ್ಮ ವ್ಯಕ್ತಿ, ಉದ್ಭವ ಆಗುತ್ತಿರುವ ನಾಯಕ. ನಾವು ಅವರಿಗೆ ಸಹಕಾರ ಕೊಡೋಣ. ಬಿಜೆಪಿಯವರು ಅವರ ಪಕ್ಷವನ್ನ ಸರಿ ಮಾಡಿಕೊಳ್ಳಲಿ ಎಂದು ತಿರುಗೇಟು ನೀಡಿದರು.

### ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿ :ಡಾ.ಯತೀಂದ್ರ



ಹಾಸನ: ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಕರ್ನಾಟಕದಲ್ಲಿ ಹೆಚ್ಚು ಸ್ಥಾನಗಳನ್ನು ಗೆದ್ದರೆ ಸಿದ್ದರಾಮಯ್ಯ ಅವರೇ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಇರಲಿದ್ದಾರೆ ಎಂದು ಸಿಎಂ ಅವರ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದ್ದಾರೆ.

ಮಂಗಳವಾರ ಹಾಸನದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದಲ್ಲೇ ರಾಜ್ಯದಲ್ಲಿ ಲೋಕಸಭಾ ಚುನಾವಣೆ ಎದುರಿಸಲಾಗುತ್ತದೆ. ಇದರಲ್ಲಿ ಹೆಚ್ಚು ಸ್ಥಾನ ಗೆದ್ದರೆ ಅಡೆತಡೆ ಇಲ್ಲದೆ 5 ವರ್ಷ ಅವರು ಮುಖ್ಯಮಂತ್ರಿಯಾಗಿರಲಿದ್ದಾರೆ ಎಂದು ಹೇಳಿದ್ದಾರೆ.

ಚುನಾವಣೆಗೂ ಮೊದಲು 5 ಉಚಿತ ಗ್ಯಾರಂಟಿಗಳನ್ನು ಘೋಷಣೆ ಮಾಡಲಾಗಿತ್ತು. ಸರ್ಕಾರಕ್ಕೆ ಒಂದು ವರ್ಷ ತುಂಬುವ ಮೊದಲೇ ಅವುಗಳನ್ನು ಜಾರಿಗೊಳಿಸಲಾಗಿದೆ. ಬಡವರು, ಶೋಷಿತರಿಗಾಗಿ ಕೆಲಸ ಮಾಡುವ ಹಂಬಲ ಕಾಂಗ್ರೆಸ್‌ಗೆ ಇದೆ. ಹಾಗಾಗಿ ನೀವೆಲ್ಲರೂ ಸಿಎಂ ಸಿದ್ದರಾಮಯ್ಯಗೆ ಬೆಂಬಲ ನೀಡಬೇಕು ಎಂದು ಯತೀಂದ್ರ ಕರೆ ನೀಡಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆದ್ದರೆ ನೈತಿಕವಾಗಿ ಸಿದ್ದರಾಮಯ್ಯ ಅವರಿಗೆ ಮತ್ತಷ್ಟು ಬೆಂಬಲ ಸಿಗಲಿದೆ. ಗ್ಯಾರಂಟಿ ಯೋಜನೆಗಳಿಗೆ ವರ್ಷಕ್ಕೆ 56 ಸಾವಿರ ಕೋಟಿ ರೂಪಾಯಿ ಖರ್ಚು ಆಗುತ್ತದೆ. ರಾಜ್ಯದಲ್ಲಿ ಯಾವ ಸರ್ಕಾರವೂ ಇಷ್ಟು ಹಣವನ್ನು ಖರ್ಚು ಮಾಡಿಲ್ಲ. ಇಷ್ಟೊಂದು ಹಣ ಖರ್ಚು ಮಾಡುತ್ತಿರುವಾಗ ಜನರ ಬೆಂಬಲ ಬೇಕು. ಆಗ ಸಿದ್ದರಾಮಯ್ಯ 5 ವರ್ಷ ಗ್ಯಾರಂಟಿ ಯೋಜನೆ ಮುಂದುವರಿಸುತ್ತಾರೆ. ಸಿಎಂ ಸಿದ್ದರಾಮಯ್ಯ ಕನಕ ಜಯಂತಿ ಆಚರಣೆ ಶುರು ಮಾಡಿದರು. ನೀವು ಬೆಂಬಲಿಸಿದ್ದರಿಂದಲೇ 2ನೇ ಬಾರಿ ಸಿಎಂ ಆದರು ಎಂದರು.

### ಬುಧವಾರ 87 ಮಂದಿಗೆ ಪಾಸಿಟಿವ್ ಧೃಡ | ಒಬ್ಬರ ಸಾವು | ಸಕ್ರಿಯ ಪ್ರಕರಣಗಳು 672ಕ್ಕೆ ಇಳಿಕೆ

## ರಾಜ್ಯದಲ್ಲಿ ಇಳಿಮುಖದತ್ತ ಕೊರೋನಾ!

ಬೆಂಗಳೂರು: ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಇಳಿಯಾಗುತ್ತಿದ್ದು, ಬುಧವಾರ 87 ಮಂದಿಗೆ ಕೊರೋನಾ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 672ಕ್ಕೆ ಇಳಿಕೆಯಾಗಿದೆ.

ಕಳೆದ 24 ಗಂಟೆಗಳಲ್ಲಿ ಬೆಂಗಳೂರಿನಲ್ಲಿ 38 ಪಾಸಿಟಿವ್ ಪ್ರಕರಣ ಸೇರಿದಂತೆ ರಾಜ್ಯದಲ್ಲಿ 87 ಮಂದಿಗೆ ಕೋವಿಡ್–19 ಪಾಸಿಟಿವ್ ದೃಢಪಟ್ಟಿದೆ. ಸೋಂಕಿನಿಂದ ಇಂದು ಒಬ್ಬರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

ಬುಧವಾರ ಕೋವಿಡ್ ನಿಂದ 165 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಕಳೆದ 24 ಗಂಟೆಗಳಲ್ಲಿ 7,589 ಮಂದಿಗೆ ಕೊರೋನಾ ಟೆಸ್ಟ್ ಮಾಡಲಾಗಿದೆ. ಪಾಸಿಟಿವಿಟಿ ದರ ಶೇ. 1.14ರಷ್ಟಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿ ನೀಡಿದೆ.


ಸೋಂಕಿತರಲ್ಲಿ 672 ಮಂದಿ ಮನೆ ಆರೈಕೆಗೆ ಒಳಗಾದರೆ, 24 ಮಂದಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 3 ಸೋಂಕಿತರು ತೀವ್ರ ನಿಗಾ ಘಟಕದಲ್ಲಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ.

### ರಾಜ ನುಡಿ

ದೇವರ ಸೃಷ್ಟಿಯಲಿ ದಾರಿಗಳು ಸರಳವಾಗಿಯೇ ಇವೆ.

ತನ್ನ ತಲೆಯುಲ್ಲಿಯು ತಿರುವುಗಳಿಂದ ಮನುಷ್ಯ ದಾರಿ ತಪ್ಪುತ್ತಾನೆ.

–ಡಾ. ರಾಜಶೇಖರ ನಾಗೂರ



### ವಚನ ಚಿಂತನ 280

ನಮ್ಮಿಷ್ಟದ ಲಿಂಗವೇ ಇಷ್ಟಲಿಂಗ

*ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ*
*ಸ್ಥಾವರದೈವಕ್ಕೆರಗಲಾಗದು.*
*ತನ್ನ ಪುರುಷನ ಬಿಟ್ಟು ಅನ್ಯಪುರುಷನ ಸಂಗ ಸಲ್ಲುವುದೇ*
*ಕರಸ್ಥಲದ ದೇವನಿದ್ದಂತೆ*
*ಧರೆಯ ಮೇಲಣ ಪ್ರತಿಷ್ಠೆಗೆರಗಿದಡೆ*
*ನರಕದಲ್ಲಿಕ್ಕುವ ಕೂಡಲಸಂಗಮದೇವ*

*– ಬಸವಣ್ಣನವರು*

ಇಷ್ಟಲಿಂಗದ ಮಹತ್ವವನ್ನು ಜನಸಾಮಾನ್ಯ–ರಿಗೆ ಅರುಹುವ ನಿಟ್ಟಿನಲ್ಲಿ ಬಸವಣ್ಣನವರು ಕೆಲವು ಬಾರಿ ಕಠೋರವಾದ ಶಬ್ದಗಳಲ್ಲಿ ತಿಳಿಹೇಳಿದ್ದಾರೆ. ಜಗದಚಾಲನಾ ಸರ್ವಶಕ್ತ ದೇವರದರ್ಶನ ನೀಡುವ ಇಷ್ಟಲಿಂಗವನ್ನು ಅಂಗದ ಮೇಲೆ ಧರಿಸಿದ್ದಾಗ್ಯೂ ಕೆಲವರು ಸ್ಥಾವರಮೂರ್ತಿಗಳಿಗೆ ಎರಗುವುದನ್ನು ಖಂಡಿಸುತ್ತ, ಒಬ್ಬ ಮಹಿಳೆ/ಪುರುಷನಿಗೆ ತನ್ನ ಸಂಗಾತಿಹೊರತು ಮತ್ತೊಬ್ಬರನ್ನು ಬಯುಸುವುದು ಹೇಗೆ ತಪ್ಪು ಮಾಡಿದಂತಾಗುವುದೋ ಹಾಗೆ ನಮ್ಮ ಅಂಗದ ಮೇಲಿರುವ ಲಿಂಗದ ಮೇಲೆ ನಮ್ಮ ನಿಷ್ಠೆವಿರಬೇಕೇ ವಿನಃ ಮತ್ತೊಂದಕ್ಕೆ ಆಸೆ ಬೇಡವೆಂದಿರುವರು, ಹಾಗೆ ಮಾಡುವುದು ನರಕಕ್ಕೆ ಸಮಾನವೆಂದಿರುವರು, ಅದೇ ಕಾರಣಕ್ಕೆ ತಮ್ಮ ಮತ್ತೊಂದು ವಚನದಲ್ಲಿ ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ, ಸುತ್ತು ಸುಳಿದು ನೋಡದಂತೆ ಅಂದಕನ ಮಾಡಯ್ಯ ತಂದೆ ಎಂದಿರುವರು, ಇಷ್ಟಲಿಂಗವೆಂಬುದು ನಮ್ಮ ಇಷ್ಟದ ಆಯ್ಕೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಜೆಜೆಎಂ ಯೋಜನೆಯಲ್ಲಿ ಅಕ್ರಮ ತಡೆಯಲು ಕೆ.ಆರ್.ಎಸ್ ಆಗ್ರಹ

ಉದಯರಶ್ಮಿ ನ್ಯೂಸ್

ವಿಜಯಪುರ: 2022–23ನೇ ಸಾಲಿನ ಜಲಜೀವನ ಮಿಷನ್ ಯೋಜನೆ ಅಡಿಯಲ್ಲಿ ಅಕ್ರಮ ನಡೆಯದಂತೆ ತಡೆಯುವಂತೆ ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾ–ರಿಗಳಿಗೆ ಮನವಿ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಾನಂದ ಯಡಹಳ್ಳಿ ಅವರು ಮಾತನಾಡಿ, ಸನ್ 2022–23ನೇ ಸಾಲಿನ ಜಲಜೀವನ್ ಮಿಷನ್ ಯೋಜನೆಯ ಅಡಿಯಲ್ಲಿ ಸರ್ಕಾರ ಪ್ರತಿಮನೆಗೆ ಶುದ್ಧ ಕುಡಿಯುವ ನೀರಿನ್ನು ಒದಗಿಸುವ ಉತ್ತಮ ಯೋಜನೆಯನ್ನು ಹಮ್ಮಿಕೊಂಡಿದೆ. ಆದರೆ ಸರ್ಕಾರಿ ಅಧಿಕಾರಿಗಳ ಮತ್ತು ಶಾಸಕರ ದಿವ್ಯ ನಿರ್ಲಕ್ಷದಿಂದಾಗಿ ಈಗಾಗಲೇ




ಕೆಲವೊಂದು ಹಳ್ಳಿಗಳಲ್ಲಿ ಕಾಮಗಾರಿ ಪ್ರಾರಂಭವಾಗಿದೆ ಇನ್ನು ಕೆಲವೊಂದು ಹಳ್ಳಿಗಳಲ್ಲಿ ಚಾಲನೆಗೊಳ್ಳುತ್ತಿದೆ. ಈ ಯೋಜನೆ ಅತ್ಯಂತ ಕಳಪೆ ಮಟ್ಟದಲ್ಲಿ ನಿರ್ಮಾಣವಾಗುತ್ತಿದೆ ಎಂದು ಸಾರ್ವಜನಿಕ ವಲಯದಲ್ಲಿ ತೀವ್ರವಾದ ಚರ್ಚೆಗೆ ಗ್ರಾಸವಾಗುತ್ತಿದೆ. ಆದ್ದರಿಂದಾಗಿ ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತಂದು ದೇವರಹಿಪ್ಪರಗಿ ಮತಕ್ಷೇತ್ರದ ಪ್ರತಿಯೊಂದು ಹಳ್ಳಿಗೂ ಶುದ್ಧ ಕುಡಿಯುವ ನೀರನ್ನು ಒದಗಿಸುವುದರ ಮೂಲಕ ಬರಗಾಲದ ನಾಡಿಗೆ ಜೀವ ಜಲ ಒದಗಿಸಿದ ಪುಣ್ಯ ಸರ್ಕಾರಕ್ಕೆ ಮತ್ತು ಪ್ರಾಮಾಣಿಕ ಅಧಿಕಾರಿ ವರ್ಗಕ್ಕೆ ತಟ್ಟುತ್ತದೆ. ಜೀವ ಜಲದ ವಿಷಯದಲ್ಲಿ ಭ್ರಷ್ಟಾಚಾರದ ವಾಸನೆ ತಾಗದೆ ಪ್ರಾಮಾಣಿಕವಾದ ಕಾಯಕದಿಂದ ಈ ಯೋಜನೆ ಯಶಸ್ವಿಯಾಗಿ ಜನರ ಮನೆ ಮನಗಳಿಗೆ ಮುಟ್ಟುವಂತೆ ಮಾಡಬೇಕಾಗಿದೆ.

ಕೇಂದ್ರ ಸರ್ಕಾರದ ಮಹತ್ವದ ಯೋಜನೆ ಆಗಿರುವ ಜೆಜೆಎಂ (ಜಲಜೀವನ್ ಮಷೀನ್) ದೇಶದ ಗ್ರಾಮೀಣ ಪ್ರದೇಶದ ಪ್ರತಿಯೊಬ್ಬ ಪ್ರಜೆಗೂ ಶುದ್ಧ ಕುಡಿವಿನ ನೀರನ್ನು ಒದಗಿಸುವ ಮಹತ್ತರವಾದ ಯೋಜನೆಯನ್ನು ಕೇಂದ್ರ ಸರ್ಕಾರ ಹಮ್ಮಿಕೊಂಡಿದೆ 2024ರ ಹೊತ್ತಿಗೆ ಪೂರ್ಣಗೊಳಿಸುವ ಗುರಿಯನ್ನು ಹೊಂದಿದೆ. ಆದರೆ ಇಂದು ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ಮತಕ್ಷೇತ್ರದಲ್ಲಿ ಈ ಹಿಂದಿನ ವರ್ಷದಲ್ಲಿ ಕಳಪೆ ಗುಣಮಟ್ಟದ ಕಾಮಗಾ–ರಿಯಿಂದಾಗಿ ಪ್ರತಿಶತ 90%ರಷ್ಟು ಈ ಯೋಜನೆ ದುರುಪಯೋಗಕ್ಕೆ ಒಳಗಾಗಿದೆ ಮತ್ತು ವ್ಯಾಪಕವಾದ ಭ್ರಷ್ಟಾಚಾರದಿಂದ ಕೂಡಿದೆ. ಸದ್ಯ ಶಾಸಕರು ಚಾಲನೆ ನೀಡುತ್ತಿರುವ 2022–23ರ ಕಾಮಗಾರಿಗಳು ಗುಣಮಟ್ಟವನ್ನು ಕಾಯ್ದುಕೊಳ್ಳಲಿ ಮತ್ತು ಬರದ ನಾಡಿಗೆ ನೀರು ಒದಗಿಸಿದ ಪುಣ್ಯ ಸರ್ಕಾರಕ್ಕೆ ಮತ್ತು ಅಧಿಕಾರಿಗಳಿಗೆ ತಟ್ಟಲಿ. ನಮ್ಮ ಭಾಗದ ಮಹಿಳೆಯರು ಒಂದರಿಂದ ಎರಡು ಕಿಲೋ ಮೀಟರ್ ದೂರದವರೆಗೆ ಬಿಂದಿಗೆಯನ್ನು ಹೊತ್ತುಕೊಂಡು ನೀರು ತರುವುದು ಸರ್ವೇಸಾಮಾನ್ಯವಾಗಿದೆ. ಯೋಜನೆಗಳು ಕೇವಲ ದಾಖಲೆಗಳಿಗೆ ಸೀಮಿತವಾಗದೆ ಕಾರ್ಯರೂಪಕ್ಕೆ ಬರಲಿ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು ಆಗ್ರಹಿಸಿದೆ.

ಈ ಸಂದರ್ಭದಲ್ಲಿ ರಾಕೇಶ ಇಂಗಳಗಿ ಹಮೀದ್ ಇನಾಮದಾರ ಪ್ರವೀಣ ಕನಸೆ ಮತ್ತಿತರರು ಇದ್ದರು.

### ಜ.18ರಿಂದ ಜ.22ರ ವರೆಗೆ ಶುಲ್ಕರಹಿತ ಹೆರಿಗೆ ಕಾರ್ಯ

## ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಹೆರಿಗೆ ಸಂಪೂರ್ಣ ಉಚಿತ!

ಉದಯರಶ್ಮಿ ನ್ಯೂಸ್

ವಿಜಯಪುರ: ಸ್ವಂತಕ್ಕೆ ಸ್ವಲ್ಪ ಸಮಾಜಕ್ಕಾಗಿ ಸರ್ವಸ್ವ ಎನ್ನುವ ನಿಟ್ಟಿನಲ್ಲಿ ಕಾರ್ಯನಿರ್ವಹಣೆ ಮಾಡುತ್ತ ಒಂದು ವರ್ಷದ ಅವಧಿಯಲ್ಲಿಯೇ ಜನರ ಪ್ರೀತಿಗೆ ಪಾತ್ರವಾಗಿರುವ ಶ್ರೀ ಸಿದ್ಧೇಶ್ವರ ಲೋಕ ಕಲ್ಯಾಣ ಚಾರಿಟೇಬಲ್ ಟ್ರಸ್ಟ್ ನಿರ್ಮಿತ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಇದೇ ತಿಂಗಳ 22 ನೇ ತಾರಿಖಿನಂದು ಅಯೋಧ್ಯೆಯಲ್ಲಿ ಜರುಗಲಿರುವ ರಾಮಮಂದಿರ ಲೋಕಾರ್ಪಣೆ ಹಾಗೂ ಶ್ರೀರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯ ಅಂಗವಾಗಿ ಅಯೋಧ್ಯಾ ಸಂಭ್ರಮೋತ್ಸವನ್ನು ಆಚರಿಸಲಾಗುತ್ತಿದೆ.

ಅದರ ಪ್ರಯುಕ್ತ ನಗರ ಶಾಸಕ ಬಸನಗೌಡ ರಾ.ಪಾಟೀಲ್ ಯತ್ನಾಳ ಅವರ ಅಪೇಕ್ಷೆಯಂತೆ ಜ.18ರಿಂದ ಜ.22ರ ವರೆಗೆ ಐದು ದಿನಗಳ ಕಾಲ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಹೆರಿಗೆ

JSS SUPER SPECIALITY HOSPITAL

ಮಾಡಿಸಿಕೊಂಡಲ್ಲಿ ಹುಟ್ಟಿದ ಮಗುವನ್ನು ಶ್ರೀ ರಾಮ ಹಾಗೂ ಸೀತಾದೇವಿ ಪ್ರತಿರೂಪವೆಂದು ಪರಿಗಣಿಸಿ ಹೆ–ರಿಗೆಯನ್ನು ಸಂಪೂರ್ಣವಾಗಿ ಉಚಿತವಾಗಿ ನೆರವೇರಿಸಲಾಗುತ್ತದೆ. ಈ ಮೂಲಕ ಅಯೋಧ್ಯೆಯಲ್ಲಿ ಜರುಗುವ ರಾಮ ಮಂದಿರದ ಉದ್ಘಾಟನೆಯ ಸಮಯವನ್ನು ಮತ್ತಷ್ಟು ಸಾರ್ಥಕವಾಗಿಸಲಾಗುತ್ತಿದ್ದು ಅವಶ್ಯಕತೆಯುಳ್ಳ ರಾಮ ಭಕ್ತರು ಇದರ ಲಾಭ ಪಡೆದುಕೊಳ್ಳಬೇಕು. ಮರ್ಯಾದಾ ಪುರುಷೋತ್ತಮ ಶ್ರೀರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆಯ ಈ ಸಂದರ್ಭದಲ್ಲಿ ಸರ್ವ ಹಿಂದೂಗಳ ಪರವಾಗಿ ನಾಡಿನ ಜನತೆಗೆ ಈ ಮೂಲಕ ಕೊಡುಗೆ ನೀಡಲಾಗುತ್ತಿದೆ ಎಂದು ಜೆಎಸ್–ಎಸ್ ಆಸ್ಪತ್ರೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಶರಣ ಮಳಖೇಡ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನುಮದಿನದ ಶುಭಾಶಯಗಳು

ನಿನ್ನ ಹುಟ್ಟುಹಬ್ಬ,
ನಮ್ಮ ಸಂಭ್ರಮ,
ಇಡೀ ವರ್ಷದಿಂದ ಕಾಯುತ್ತಿದ್ದೆವು
ಈ ಸುದಿನಕ್ಕೆ,
ಬಾಳು ಹಸಿರಾಗಿಸುವ ಶುಭ
ಸಂದರ್ಭಕ್ಕೆ ನೂರು ವರ್ಷ
ಸುಖವಾಗಿ ಬಾಳು
ನಮ್ಮಿಂದ ನಿನಗೆ ಹುಟ್ಟು ಹಬ್ಬದ
ಶುಭಾಶಯಗಳು



ಕು. ರಶ್ಮಿ ಇಂದುಶೇಖರ ಮಣೂರ MCA
Software Engineer, Blore.

ಶುಭ ಕೋರುವವರು
ಇಂದುಶೇಖರ ಮಣೂರ ಮತ್ತು ಕುಟುಂಬ ವರ್ಗ
'ಉದಯ ರಶ್ಮಿ' ಪತ್ರಿಕಾ ಬಳಗ, ವಿಜಯಪುರ

# ಆಧ್ಯಾತ್ಮಿಕತೆಯಿಂದ ಅರಿವಿನ ದೀಪ ಬೆಳಗಿಸಿದ ಸಿದ್ದೇಶ್ವರ ಶ್ರೀ

ಉದಯರಶ್ಮಿ ನ್ಯೂಸ್



ವಿಜಯಪುರ: ಸ್ವಾಮಿ ವಿವೇಕಾನಂದರು ಹಾಗೂ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ವ್ಯಕ್ತಿ ತನ್ನನ್ನು ತಾನಾರು ಎನ್ನುವುದನ್ನು ಕಂಡುಕೊಂಡಾಗ ಮಾತ್ರ ಅರಿವಿನ ಬೆಳಕಿನೆಡೆಗೆ ಮನುಷ್ಯ ಸಾಗುವುದಕ್ಕೆ ಸಾಧ್ಯವಾಗುತ್ತದೆ ಎಂದು ರಾಮಕೃಷ್ಣ ಆಶ್ರಮದ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ನಗರದ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ಸ್‌ನಲ್ಲಿ ಆಯೋಜಿಸಲಾಗಿದ್ದ ಸ್ವಾಮಿ ವಿವೇಕಾನಂದರ 161 ಜನ್ಮದಿನೋತ್ಸವ ಹಾಗೂ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಗುರುನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಡೀ ಜಗತ್ತಿಗೆ ನಿಜವಾದ ಭಾರತವನ್ನು ಪರಿಚಯಿಸುವ ಮೂಲಕ ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರ ಹಾಗೂ ಪರಂಪರೆಯ ಪರಿಚಯ ಮಾಡಿಕೊಟ್ಟ ಸ್ವಾಮಿ ವಿವೇಕಾನಂದರು ಹಾಗೂ ಆಧ್ಯಾತ್ಮಿಕ ಶಕ್ತಿಯ ಮೂಲಕ ಜನಸಾಮಾನ್ಯರಲ್ಲಿ ಅರಿವಿನ ದೀಪ ಪ್ರಜ್ವಲಿಸಿದವರು ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಎಂದು ಹೇಳಿದರು.

ವಿಜ್ಞಾನ ತಂತ್ರಜ್ಞಾನದಲ್ಲಿ ಮುಂದುವರಿದಿರುವ ಭಾರತ ಸ್ವಾಮಿ ವಿವೇಕಾನಂದರನ್ನು ಅರಿಯುವಲ್ಲಿ ಎಡವಿದೆ. ಪಾಶ್ಚಾತ್ಯರು ಅವರ ಮಾತುಗಳನ್ನು ಕೇಳಿ ತಮ್ಮ ಬದುಕಿನಲ್ಲಿ ಪರಿವರ್ತನೆ ತಂದುಕೊಂಡರು. ಇಂದಿಗೂ ಅಮೇರಿಕಾದ 28 ಪ್ರತಿಶತ ಜನಗಳು ಭಾರತೀಯ ಸಂಸ್ಕೃತಿಯಂತೆ ಬದುಕು ಕಟ್ಟಿಕೊಳ್ಳುತ್ತಿರುವುದಕ್ಕೆ ಕಾರಣವಾಗಿದ್ದು ಸ್ವಾಮಿ ವಿವೇಕಾನಂದರ ವಿಚಾರದ ಹರಿವು ಅವರ ದೇಶದಲ್ಲಿ ಪ್ರವಾಹದಂತೆ ಬೋರ್ಗರೆದಿದ್ದು. ಆದ–ರೆ ನಮ್ಮ ಭಾರತೀಯರಿಗೆ ಇದರ ಅರಿವಾಗುತ್ತಿಲ್ಲವೆಂದು ವಿಷಾದಿಸಿದ ಅವರು, ಸ್ವಾಮಿ ವಿವೇಕಾನಂದ, ಸಿದ್ಧೇಶ್ವರ ಸ್ವಾಮೀಜಿಯವರ ವಿಚಾರಗಳನ್ನು ಅರಿಯಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿದ್ಧೇಶ್ವರ ಸಂಸ್ಥೆಯ ಉಪಾಧ್ಯಕ್ಷ ಸಂಗು ಸಜ್ಜನ, ನಿರ್ಭಯಾನಂದ ಸರಸ್ವತಿಯವರ ರೂಪದಲ್ಲಿ ಸ್ವಾಮಿ ವಿವೇಕಾನಂದರು ಚಿರ ಶಾಶ್ವತವಾಗಿರುವಂತೆ ಪೂಜ್ಯ ಸಿದ್ಧೇಶ್ವರ ಸ್ವಾಮೀಜಿಯವರು ತಮ್ಮ ಚಿಂತನೆಗಳ ಮೂಲಕ ಇಂದು ಪ್ರತಿಯೊಬ್ಬರ ಎದೆಯಲ್ಲಿ ಶಾಶ್ವತವಾಗಿ ಉಳಿದಿದ್ದಾರೆ ಎಂದರು.

ವಿಜಯಪುರ ರಾಮಕೃಷ್ಣ ಆಶ್ರಮದ ಸ್ವಾಮೀ ನರೇಶಾನಂದ, ಜೆ–ಎಸ್‌ಎಸ್ ಆಸ್ಪತ್ರೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಶರಣ ಮಳಖೇಡ್ಕರ್ ಸೇರಿದಂತೆ ಆಸ್ಪತ್ರೆ ಸರ್ವ ಸಿಬ್ಬಂದಿ ಉಪಸ್ಥಿತರಿದ್ದರು.

# ಜ.19 ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಉದಯರಶ್ಮಿ ನ್ಯೂಸ್

ವಿಜಯಪುರ: ಕೆಪಿಟಿಸಿಎಲ್ ವತಿಯಿಂದ 110/11 ಕೆವ್ಹಿ ಭೂತನಾಳ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 11 ಕೆವ್ಹಿ 20ಎಂವಿಎ, 110/33 ಕೆವ್ಹಿ ಶಕ್ತಿ ಪರಿವರ್ತಕದ ಛೇದಕ ದುರಸ್ತಿ ಕಾಮಗಾರಿ ಕೈಗೊಳ್ಳುವುದರಿಂದ 33/11 ಕೆವ್ಹಿ ತಿಡಗುಂದಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲ 11 ಕೆವ್ಹಿ ವಿದ್ಯುತ್ ಮಾರ್ಗಗಳಿಗೆ ಹಾಗೂ 33/11 ಕೆವ್ಹಿ ಅರಕೇರಿ ಎಲ್‌ಐಎಸ್‌ಗೆ ಜನವರಿ 19 ರಂದು ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ವಿಜಯಪುರ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಕೋರಿದ್ದಾರೆ.

# ಮಹಿಳೆ ಕಾಣೆ: ಪತ್ತೆಗೆ ಮನವಿ

ಉದಯರಶ್ಮಿ ನ್ಯೂಸ್



ವಿಜಯಪುರ: ಜಿಲ್ಲೆಯ ತಿಕೋಟಾ ತಾಲೂಕಿನ ದಂದರಗಿ ಗ್ರಾಮದ 32 ವರ್ಷದ ಲಲಿತಾ ಗಂ.ನಾಗೇಶ ಮೇಲಸಕ್ಕರಿ ಎಂಬ ಮಹಿಳೆ ದಿನಾಂಕ : 02–12–2022 ರಿಂದ ವಿಜಯಪುರ ನಗರದ ಉಪಲಿ ಬುರುಜ್ ಹತ್ತಿರದಿಂದ ಕಾಣೆಯಾಗಿರುವ ಕುರಿತು ವಿಜಯಪುರ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾಣೆಯಾದ ಮಹಿಳೆ ಪತ್ತೆಗೆ ಠಾಣೆಯ ಪೊಲೀಸ್ ಇನ್ಸಪೆಕ್ಟರ್ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಕಾಣೆಯಾಗಿರುವ ಮಹಿಳೆಯು 5.4 ಎತ್ತರ, ಸಾಧಾರಣ ಮೈಕಟ್ಟು, ಕೋಲುಮುಖ, ಗೋಧಿಬಣ್ಣ, ಕನ್ನಡ ಭಾಷೆ ಬಲ್ಲವಳಾಗಿದ್ದು, ಕಾಣೆಯಾದ ಸಂದರ್ಭದಲ್ಲಿ ಬೂದು ಬಣ್ಣದ ಮತ್ತು ಹಳದಿ ಬಣ್ಣದ ಚೂಡಿದಾರ ಧರಿಸಿದ್ದಳು.ಈ ಚಹರೆಪಟ್ಟಿಯುಳ್ಳ ಮಹಿಳೆ ಪತ್ತೆಯಾದಲ್ಲಿ ಸಾರ್ವಜನಿಕರು ಪೊಲೀಸ್ ಅಧೀಕ್ಷಕರು ದೂ: 08352–250152, ಜಿಲ್ಲಾ ನಿಸ್ತಂತು ಕಚೇರಿ ದೂ: 08352–250844, ಮಹಿಳಾ ಪೊಲೀಸ್ ಠಾಣೆ ಮೊ: 9480804270 ಸಂಖ್ಯೆಗೆ ಮಾಹಿತಿ ನೀಡುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಚಾರಿ ನಿಯಮ ಪಾಲಿಸಿ ಜೀವಹಾನಿ ತಡೆಯಿರಿ :ಡಿವೈಎಸ್ಪಿ ಯಲಿಗಾರ

ಉದಯರಶ್ಮಿ ನ್ಯೂಸ್



ವಿಜಯಪುರ: ಸಂಚಾರಿ ನಿಯಮಗಳ ಪಾಲನೆ ಮತ್ತು ಜಾಗರೂಕತೆಯಿಂದ ವಾಹನ ಚಲಾಯಿಸಿದರೆ ರಸ್ತೆ ಅಪಘಾತ ಹಾಗೂ ಜೀವಹಾನಿ ತಡೆಯಲು ಸಾಧ್ಯ ಎಂದು ವಿಜಯಪುರ ನಗರ ಡಿವೈಎಸ್ಪಿ ಬಸವರಾಜ ಯಲಿಗಾರ ಹೇಳಿದ್ದಾರೆ.

ನಗರದ ಬಿ. ಎಲ್. ಡಿ. ಇ ಡೀಮ್ಡ್ ವಿಶ್ವವಿದ್ಯಾಲಯದ ಟ್ರಾಮಾ ಸೆಂಟರ್‌ನಲ್ಲಿ ವಿವಿಯ ಆಂತರಿಕ ಗುಣಮಟ್ಟ ಭರವಸೆ ಕೋಶ(ಐಕ್ಯೂಎಸಿ) ವತಿಯಿಂದ ಇಂದು ಬುಧವಾರ ಆಯೋಜಿಸಲಾಗಿದ್ದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ರಸ್ತೆ ಅಪಘಾತಗಳು ಮತ್ತು ಅವುಗಳಿಗೆ ಕಾರಣಗಳ ಕುರಿತು ಎಳೆ–ಎಳೆಯಾಗಿ ಮಾಹಿತಿ ನೀಡಿದ ಅವರು, ರಸ್ತೆ ಅಪಘಾತ ಮತ್ತು ಜೀವಹಾನಿ ತಪ್ಪಿಸಲು ಹಾಗೂ ಸಾರ್ವಜನಿಕರ ಸುರಕ್ಷತೆಗಾಗಿ ಸರಕಾರಗಳು ಸಂಚಾರಿ ನಿಯಮಗಳನ್ನು ರೂಪಿಸಿವೆ. ಆದರೆ, ಬಹಳಷ್ಟು ಚಾಲಕರು ವಾಹನಗಳ ಚಾಲನೆ ಸಂದರ್ಭದಲ್ಲಿ ಅವುಗಳ ಬಗ್ಗೆ ಗಮನ ಹರಿಸುವುದಿಲ್ಲ. ಅತೀ ವೇಗದ ಚಾಲನೆ, ಸಂಚಾರಿ ನಿಯಮಗಳ ಉಲ್ಲಂಘನೆ, ಮದ್ಯಪಾನ ಸೇವನೆ ಮಾಡಿ ವಾಹನ ಚಲಾಯಿಸುವುದರಿಂದ ಹೆಚ್ಚು ಅಪಘಾತಗಳು ಉಂಟಾಗುತ್ತಿವೆ. ಚಾಲಕರು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿದರೆ ಅದರಿಂದ ತಾವಷ್ಟೇ ಅಲ್ಲ, ಆ ವಾಹನಗಳಲ್ಲಿರುವ ಇತರ ಪ್ರಯಾಣಿಕರಿಗೆ ಉಂಟಾಗುವ ಹಾನಿ ಮತ್ತು ತಮ್ಮನ್ನೇ ನಂಬಿರುವ ಕುಟುಂಬ ಸದಸ್ಯರ ಭವಿಷ್ಯಕ್ಕೂ ತೊಂದರೆ ಎದುರಾಗುತ್ತದೆ ಎಂಬುದರ ಬಗ್ಗೆ ಎಚ್ಚರಿಕೆ ವಹಿಸಬೇಕು. ವೇಗದ ಚಾಲನೆ ಥ್ರಿಲ್ ನೀಡುತ್ತದೆಯಾದರೂ ಕಿಲ್ ಮಾಡುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂದು ಅವರು ಹೇಳಿದರು.

ಪ್ರತಿಯೊಬ್ಬರಿಗೂ ಜೀವ ಅಮೂಲ್ಯವಾಗಿದೆ. ಹೀಗಾಗಿ ವಾಹನ ಚಾಲನೆ ಮಾಡುವ ಮುನ್ನ ಅದರ ಸೈಡ್ ಬ್ರೇಕ್, ಸೀಟ್ ಬೆಲ್ಟ್, ಸೈಡ್ ಕನ್ನಡಿಗಳು ಸರಿಯಾಗಿರುವ ಬಗ್ಗೆ ಪರಿಶೀಲನೆ ನಡೆಸಬೇಕು. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಹಾಕಿಕೊಳ್ಳಬೇಕು. ತಾವು ಸಂಚರಿಸುವ ಮಾರ್ಗಗಳಲ್ಲಿ ಸದಾ ಜಾಗರೂಕತೆಯಿಂದ ವಾಹನ ಓಡಿಸಿದರೆ ಸುರಕ್ಷಿತ ಪ್ರಯಾಣ ಸಾಧ್ಯ ಎಂದು ಅವರು ಹೇಳಿದರು.

ಈ ಬಾರಿ ರಸ್ತೆ ಸುರಕ್ಷತಾ ಸಪ್ತಾಹಕ್ಕೆ ಝಿರೊ ಹಾರ್ಮ್ ಆ್ಯಂಡ್ ಬಿ ಎ ಹೀರೊ ಘೋಷ್ಯವಾಕ್ಯ ನೀಡಲಾಗಿದೆ. ಹೀಗಾಗಿ ಪ್ರತಿಯೊಬ್ಬರು ಅಪಘಾತ ರಹಿತ ವಾಹನ ಚಲಾಯಿಸಿ ಉತ್ತಮ ಜೀವನ ಸಾಗಿಸಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ರಸ್ತೆ ಸುರಕ್ಷತೆ ಮತ್ತು ಸಂಚಾರಿ ನಿಯಮಗಳ ಪಾಲನೆ ಕುರಿತು ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಕಾಲೇಜಿನ ಉಪಪ್ರಾಚಾರ್ಯ ಡಾ. ಎಂ. ಬಿ. ಪಾಟೀಲ, ಡಾ. ಸುಮಂಗಲಾ ಪಾಟೀಲ ಮುಂತಾದವರು ಉಪಸ್ಥಿತ–ರಿದ್ದರು.,

ಐಕ್ಯೂಎಸಿ ನಿರ್ದೇಶಕಿ ಡಾ. ಲತಾ ಮುಳ್ಳೂರು ಸ್ವಾಗತಿಸಿ ಪರಿಚಯಿಸಿದರು. ಡಾ. ಸಿದ್ದಲಿಂಗ ತಾಳಿಕೋಟಿ ಪ್ರತಿಜ್ಞಾವಿಧಿ ಬೋಧಿಸಿದರು. ಡಾ. ನಿಲಿಮಾ ಡೋಂಗ್ರೆ ವಂದಿಸಿದರು.

# ಮನೆ ಮನೆಗೆ ಮಂತ್ರಾಕ್ಷತೆ :ರಾಮರಥ ಮೆರವಣಿಗೆ



ಉದಯರಶ್ಮಿ ನ್ಯೂಸ್

ಕಲಕೇರಿ: ಸುಮಾರು 500 ವರ್ಷಗಳ ಹೋರಾಟದಲ್ಲಿ ವಿಶ್ವಹಿಂದೂ ಪರಿಷತ್‌ನ ಕಾರ್ಯಕರ್ತರು, ಸಾಧುಸಂತರು ಸೇರಿದಂತೆ ಸುಮಾರು 2 ಲಕ್ಷ ಸ್ವಯಂ ಸೇವಕರ ತ್ಯಾಗದ ಪ್ರತಿಫಲವಾಗಿ ಇಂದು ರಾಮಮಂದಿರ ನಿರ್ಮಾಣವಾಗುತ್ತಿದೆ. ರಾಮನ ಆಗಮನಕ್ಕೆ ಶಬರಿಯಂತೆ ಕಾದಿದೆ ಈ ಧರೆ, ಮನೆ ಮನೆಗೂ ಮರ್ಯಾದಾ ಪುರುಷೋತ್ತಮನ ಆಗಮನದ ಆಮಂತ್ರಣ ತಲುಪುತ್ತಿದೆ, ಅದರ ನಿಮಿತ್ಯ ರಾಮಜನ್ಮಭೂಮಿ ಟ್ರಸ್ಟ್ ಕಳಿಸಿರುವ ಆರ್ಶಿವಾದದ ಮಂತ್ರಾಕ್ಷತೆಯನ್ನು ತಲುಪಿಸಲಾಗುತ್ತಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ತಾಳಿಕೋಟಿ ತಾಲೂಕಾ ಕಾರ್ಯಕಾರಣಿ ಸಂಗಮೇಶ ಪಾಲಕಿ ಅವರು ಮಾತನಾಡಿದರು.

ಕಲಕೇರಿ ಗ್ರಾಮದ ಯಲ್ಲಾಲಿಂಗ ಮಹಾರಾಜ ಮಠದಿಂದ ವಿವಿಧ ವಾದ್ಯಗಳೊಂದಿಗೆ ಕೇಸರಿ ಶಾಲುಗಳೊಂದಿಗೆ ನೂರಾರು ಸ್ವಯಂ ಸೇವಕರೊಂದಿಗೆ ಶ್ರೀರಾಮನ ರಥದ ಭವ್ಯ ಮೆರವಣಿಗೆ ಮುಖ್ಯ ಭಜಾರದ ಮೂಲಕ ಗ್ರಾಮದ ಓಣಿಗಳಲ್ಲಿ ಸಂಚರಿಸಿ ಮನೆ ಮನೆಗೆ ಮಂತ್ರಾಕ್ಷತೆ ತಲುಪಿಸಲಾಯಿತು, ರಾಮ, ಲಕ್ಷ್ಮಣ, ಸೀತೆ ಹಾಗೂ ಹನುಮನ ವೇಷಭೂಷಣದಲ್ಲಿ ಮಕ್ಕಳು ಕಂಡರು,

ಗುರುಮರುಳಾರಾಧ್ಯ ಸಂಸ್ಥಾನ ಹಿರೇಮಠದ ಪೀಠಾದಿಪತಿಗಳಾದ ಸಿದ್ದರಾಮ ಶಿವಾಚಾರ್ಯರು, ಪಂಚರಂಗ ಸಂಸ್ಥಾನ ಗದ್ದುಗೆ ಮಠದ ಪೀಠಾದಿಪತಿ ಮಡಿವಾಳೇಶ್ವರ ಶಿವಾಚಾರ್ಯರು, ಮುಖಂಡರಾದ ಸಿದ್ದು ಬುಳ್ಳಾ ಮಾತನಾಡಿ ಇದೇ 22 ರಂದು ನರೇಂದ್ರ ಮೋದಿಯವ–ರಿಂದ ಉದ್ಘಾಟನೆಗೊಳ್ಳುತ್ತಿರುವ ಪ್ರಭು ಶ್ರೀರಾಮ ಮಂದಿರ ಹಿಂದೂಗಳ ಹೆಮ್ಮೆಯ ವಿಷಯವಾಗಿದೆ, ಅಂದು ನಾವೆಲ್ಲರೂ ಸಂಭ್ರಮದಿಂದ ನಮ್ಮ ಮನೆಗಳಲ್ಲಿ ವಿಶೇಷವಾಗಿ ಆಚರಿಸೋಣ ಎಂದರು.

ಈ ಸಂದರ್ಭದಲ್ಲಿ ಯಮನೂರಿ ಕುಲಕರ್ಣಿ, ಹಣಮಂತ ವಡ್ಡರ, ನಾನಾಗೌಡ ಚೌಧರಿ, ಶಂಕರಗೌಡ ಬಿರಾದಾರ, ಪ್ರತೀಕ ಕುಲಕರ್ಣಿ, ಷಣ್ಮುಕಪ್ಪ ಝುಳಕಿ, ಮಲ್ಲು ದೇಸಾಯಿ, ದೇವಿಂದ್ರ ಕಡಕೋಳ, ವಿಶ್ವನಾಥ ಸಬರದ, ಪ್ರಕಾಶ ಯರನಾಳ, ಸುರೇಶರಡ್ಡಿ ಪಾಟೀಲ, ಪ್ರವೀಣ ಜಗಶೆಟ್ಟಿ, ವಿರೇಶ ನೆಲ್ಲಗಿ, ಮಡಿವಾಳಪ್ಪ ಹೂಗಾರ, ವಿಶ್ವನಾಥ ರಾಠೋಡ, ಮಡು ಜಂಬಗಿ, ರಾಕೇಶ ಕೊಂಡಗೂಳಿ, ಈರಣ್ಣ ಗುಮಶೆಟ್ಟಿ, ಶ್ರೀಶೈಲ ಬೈಚಬಾಳ, ಅಭಿಷೇಕ ಗದ್ದಗೆಮಠ, ವಾಗೀಶ ನಾಗಠಾಣ, ಚೇತನ ಶಹಾಪುರ, ಪ್ರಮೋದ ಹೆಗ್ಗಣದೊಡ್ಡಿ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸ್ನಾತಕೋತ್ತರ ಪದವಿ & ಸರ್ಟಿಫಿಕೆಟ್ ಕೋರ್ಸುಗಳಿಗೆ ಪ್ರವೇಶಗಳು ಪ್ರಾರಂಭ

ಉದಯರಶ್ಮಿ ನ್ಯೂಸ್

ವಿಜಯಪುರ: ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ(ಇಗ್ನೊ) ಪ್ರಸಕ್ತ ವರ್ಷ 2024ರ ಮೊದಲ ಭಾಗ(ಜನೇವರಿ) ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ಹಾಗೂ ಸರ್ಟಿಫಿಕೆಟ್ ಕೋರ್ಸುಗಳಿಗೆ ಪ್ರವೇಶಗಳು ಪ್ರಾರಂಭವಾಗಿದ್ದು, 31.01.2024ರ ಒಳಗಾಗಿ ಪ್ರವೇಶ ಪಡೆಯಬಹುದಾಗಿದೆ ಎಂದು ಇಗ್ನೊ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿ ಡಾ. ಮಂಜುನಾಥ ಕೋರಿ ತಿಳಿಸಿದ್ದಾರೆ.

ಇಗ್ನೊದಲ್ಲಿ ವರ್ಷಕ್ಕೆ ಎರಡು ಬಾರಿ ಯಾವುದೇ ಪದವಿ ಮತ್ತು ಸ್ನಾತಕೋತ್ತರ ಪದವಿ ಹಾಗೂ ಸರ್ಟಿಫಿಕೇಟ್ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅವಕಾಶವಿದೆ. ಈಗ ಮೊದಲ ಹಂತದ ಪ್ರವೇಶಕ್ಕೆ ನೋಂದಣಿ ಆರಂಭವಾಗಿವೆ ಎಂದು ಅವರು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಇಗ–್ನೊ ಅದ್ಯಯನ ಕೇಂದ್ರ, 1307, ಬಿ.ಎಲ್.ಡಿ.ಇ ಸಂಸ್ಥೆಯ ಜೆ.ಎಸ್. ಎಸ್ ಶಿಕ್ಷಣ ಮಹಾವಿದ್ಯಾಲಯ, ರಾಮ ಮಂದಿರ ರಸ್ತೆ, ಎಸ್. ಎಸ್. ಕ್ಯಾಂಪಸ್ ವಿಜಯಪುರ, ಮೊಬೈಲ್ ಸಂಖ್ಯೆ– 9980691291 ಸಂಪರ್ಕಿಸಬಹುದಾಗಿದೆ. ಅಲ್ಲದೇ, ಪ್ರವೇಶ ಬಯಸುವವರು ತಿತಿತಿ.ಎರ–ಟಿಂಣ.ಚಿಛಿ.ಎಟ ನಲ್ಲಿ ಲಾಗಿನ್ ಆಗಿ ಆನಲೈನ್ ಮೂಲಕವೂ ನೋಂದಣಿ ಮಾಡಿಸಬಹುದಾಗಿದೆ ಎಂದು ಡಾ. ಮಂಜುನಾಥ ಕೋರಿ ತಿಳಿಸಿದ್ದಾರೆ.

## ರೇವತಗಾಂವದ ಶ್ರೀ ಸಿಂಹಗಢ ಮಹಾರಾಜರ 54ನೇ ಪುಣ್ಯಾರಾಧನೆ ಸಂಪನ್ನ

# ಶರಣರ ವಚನಗಳು ಮನುಕುಲದ ದಾರಿ ದೀಪ :ಶಾಸಕ ಯಶವಂತರಾಯಗೌಡ

ಉದಯರಶ್ಮಿ ನ್ಯೂಸ್



ಚಡಚಣ: ಶರಣರ ಆಚರಣೆಗಳು ಯಾವುದೇ ಒಂದು ಜಾತಿ, ಜನಾಂಗ, ವರ್ಗಕ್ಕೆ ಸೀಮಿತವಾಗಿಲ್ಲ. ಮನುಕುಲದ ಸಂತರಾಗಿರುವ ಸಿಂಹಗಢ ಮಹಾರಾಜರಂತಹ ಮಹಾತ್ಮರ ಸಂದೇಶಗಳು, ಪವಾಡಗಳು ಮನುಕುಲ ಸರಿಯಾದ ದಾರಿಯಲ್ಲಿ ನಡೆಯುವುದಕ್ಕೆ ದಾರಿ ದೀಪವಾಗುತ್ತವೆ ಎಂದು ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ್ ಹೇಳಿದರು.

ಬುಧವಾರ ರೇವತಗಾಂವ ಗ್ರಾಮದ ಶ್ರೀ ಸಿಂಹಗಢ ಮಹಾರಾಜರ 54ನೇ ಪುಣ್ಯಾರಾಧನೆ ಕಾರ್ಯಕ್ರಮದ 'ಧರ್ಮ ಸಭೆ' ಯನ್ನು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಸಿಂಹಗಢ ಮಹಾರಾಜರಂತಹ ಶರಣರು ಅಂದು ನುಡಿದ ವಿಚಾರಗಳು ಇಂದಿಗೂ ಪ್ರಸ್ತುತ. ಅವರ ವಚನಗಳು, ನಾಣ್ನುಡಿಗಳು ಇಂದಿಗೂ ಅಜರಾಮರವಾಗಿದ್ದು, ಸಮಾಜಕ್ಕೆ ಅವರ ಕೊಡುಗೆ ಅಪಾರ. ಅವರ ಅರ್ಥಪೂರ್ಣವಾದ ತತ್ವಾದರ್ಶ ವಿಚಾರ ಹಾಗೂ ಸಂದೇಶಗಳನ್ನು ಪ್ರತಿಯೊಬ್ಬರು ಬದುಕಿನಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ ಕಟಕಧೋಂಡರವರು ಮಾತನಾಡುತ್ತ, ಸಮಾಜದಲ್ಲಿ ನಾವು ಏನಾದರೂ ಬದಲಾವಣೆ ಮಾಡಬೇಕು ಎಂಬ ಇಚ್ಛಾಶಕ್ತಿ ಇದ್ದರೆ ಶಿಕ್ಷಣದಿಂದ ಮಾತ್ರ ಸಾಧ್ಯ. ಶಿಕ್ಷಣ ಮನುಷ್ಯನ ಸಂಸ್ಕಾರ ನಡೆ, ನುಡಿ ಮಾನವೀಯ ಬದುಕಿಗೆ ದಾರಿ ದೀಪವಿದ್ದಂತೆ. ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಜೊತೆ ಸಂಸ್ಕಾರ ನೀಡಿ. ಸಾಂಸ್ಕೃತಿಕ ವ್ಯಕ್ತಿತ್ವ ವ್ಯಕ್ತಿಯನ್ನು ತಲೆಯೆತ್ತಿ ಬಾಳುಂತೆ ಮಾಡುತ್ತದೆ, ಇಂಥಹ ಸಾಂಸ್ಕೃತಿಕ ಮನಸ್ಸು ಪ್ರತಿಯೊಬ್ಬರಲ್ಲೂ ಬರಬೇಕು ಎಂದು ಹೇಳಿದರು.

ಹತ್ತಳ್ಳಿಯ ಹಿರೇಮಠದ ಗುರುಪಾದೇಶ್ವರ ಶಿವಾಚಾರ್ಯರು ಹಾಗೂ ಹಾವಿನಾಳದ ವಿಜಯಮಹಾಂತೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ "ಧರ್ಮಸಭೆ" ಕಾರ್ಯಕ್ರಮ ನೇರವೇರಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ರಾಜು ಆಲಗೂರ, ಬಿಜಾಪುರ ಜಿಲ್ಲಾ ಬಂಜಾರಾ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ರಾಜಶೇಖರ ಚವ್ಹಾಣ್, ಕೆರೂರದ ಭೈರವನಾಥ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮಹಾದೇವಸಾವುಕಾರ ಭೈರಗೊಂಡ, ಮರಗೂರ ಭೀಮಾಶಂಕರ ಶುಗರ್ಸ್ ನಿರ್ದೇಶಕ ಎಂ.ಆರ್.ಪಾಟೀಲ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಗಂಗಾಧರ ಸಂಭಾಣಿ, ಮಹಾದೇವ ಹಿರೇಕುರುಬರ, ಮಾಜಿ ಜಿಪಂ ಸದಸ್ಯ ಭೀಮಾಶಂಕರ ಬಿರಾದಾರ, ಮಾಜಿ ತಾಪಂ ಸದಸ್ಯ ಶಿವಾಜಿ ವಾಲೀಕಾರ, ಚಡಚಣ ಮಂಡಲ ಬಿಜೆಪಿ ಅಧ್ಯಕ್ಷ ರಾಮ ಅವಟಿ, ಉದಯ ಕಾರಜೋಳ, ಸಂಜು ಐಹೊಳ್ಳಿ, ದಯಾನಂದ ಮಠ, ಎಂ.ಎಂ.ರಾಠೋಡ, ಚಡಚಣ ಪಪಂ ಮಾಜಿ ಅಧ್ಯಕ್ಷ ಬಾಬುಗೌಡ ಪಾಟೀಲ, ಸಾಹೇಬಗೌಡ ಬಿರಾದಾರ, ಬಾಬಾಸಾಹೇಬ ವಿಜಯದಾರ, ಸತೀಶ ಕುಂಬಾರ, ಗಂಗಾಧರ ಐಹೊಳ್ಳಿ, ಹುನ್ನೂರದ ಪರಶುರಾಮ ವನಮೋರೆ, ಬರೂರದ ಆನಂದ ಶಾಸ್ತ್ರಿಗಳು, ತದ್ದೇವಾಡಿಯ ಮಹಾಂತೇಶ ಹಿರೇಮಠ ಶಾಸ್ತ್ರಿಗಳು, ಗದಗದ ಅಧ್ಯಾತ್ಮ ವಿದ್ಯಾಶ್ರಮದ ಶಿವಶರಣೆ ಮೈತ್ರಾದೇವಿ, ಹುಲ್ಯಾಳದ ಸಿದ್ಧಓಂಕಾರ ಆಶ್ರಮದ ಶಿವಶರಣೆ ಡಾ. ನೀಲಮ್ಮತಾಯಿ ಅಸುಂಡೆರವರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಎಂ.ಎಚ್.ಅಡಕೆ ಹಾಗೂ ಗುರು ಜೇವೂರರವರು ನೆರವೇರಿಸಿದರು.

54ನೇ ಪುಣ್ಯಾರಾಧನೆ ಸಂಪನ್ನ: ಕರ್ನಾಟಕ–ಮಹಾರಾಷ್ಟ್ರದ ಗಡಿಭಾಗದ ರೇವತಗಾಂವ ಗ್ರಾಮದ ಸದ್ಗುರು ಸಿಂಹಗಢ ಮಹಾರಾಜರ 54ನೇ ಪುಣ್ಯಸ್ಮರಣೆ ಬುಧವಾರದಂದು ಅದ್ಧೂರಿಯಾಗಿ ನೆರವೇರಿತು.

ಸತತ ಒಂದು ವಾರ ನಡೆದ ಕಾರ್ಯಕ್ರಮದಲ್ಲಿ ಅನೇಕ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅಂತಿಮ ದಿನದಂದು ಭವ್ಯ ಧರ್ಮ ಸಭೆ ಏರ್ಪಡಿಸಿ ಕಾರ್ಯಕ್ರಮಕ್ಕೆ ತೆರೆ ಎಳೆಯಲಾಯಿತು. ಬೆಳಗ್ಗೆ 8 ಗಂಟೆಗೆ ಸಿಂಹಗಢ ಮಹಾರಾಜರ ಭಾವಚಿತ್ರ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚ–ರಿಸಿತು. ನೂರಾರು ಸುಮಂಗಲೆಯರ ಆರತಿ, ಕುಂಭ ಕಳಸಗಳೊಂದಿಗೆ ಮೆರವಣಿಗೆಯುದ್ದಕ್ಕೂ ಸಾಗಿದರು. ವಿವಿಧ ಕಲಾ ತಂಡಗಳು ಮೆರವಣಿಗೆಗೆ ಮೆರಗು ತಂದವು. ಬೆಳಗ್ಗೆ 11 ಗಂಟೆಗೆ ಹತ್ತಳ್ಳಿಯ ಹಿರೇಮಠದ ಗುರುಪಾದೇಶ್ವರ ಶ್ರೀಗಳು ಹಾಗೂ ಹಾವಿನಾಳದ ವಿಜಯಮಹಾಂತೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ಸದ್ಗುರುವಿಗೆ 'ಹೂ ಬೀಳುವ' ಕಾರ್ಯಕ್ರಮ ಸಂಭ್ರಮದಿಂದ ನಡೆಯಿತು. ಈ ವೇಳೆ ಶ್ರೀರಾಮನ ಮಂತ್ರಾಕ್ಷತೆ ಪೂಜೆ ಮಾಡಿ ವಿತರಣೆ ಮಾಡಲಾಯಿತು. ನಂತರ ಭಕ್ತರಿಗೆ ಅನ್ನ ಪ್ರಸಾದ ವಿತರಣೆ ಮಾಡಲಾಯಿತು.

# ರಾಮ ಮಂದಿರದ ಮಂತ್ರಾಕ್ಷತೆ ವಿತರಣೆ



ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಪಟ್ಟಣದ ಜ್ಞಾನ ಭಾರತಿ ವಿದ್ಯಾ ಮಂದಿರದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೇರಿ ಅಯೋಧ್ಯಾ ನಗರಿಯಿಂದ ಶ್ರೀರಾಮದೇವಳದ ಉದ್ಘಾಟನೆಯ ಆಹ್ವಾನಾರ್ಥವಾಗಿ ಬಂದಿರುವ ಪವಿತ್ರ ಮಂತ್ರಾಕ್ಷತೆ ಮತ್ತು ಕರೆಯೋಲೆಯನ್ನು 500ಕ್ಕೂ ಹೆಚ್ಚು ಮನೆಗಳಿಗೆ ವಿತರಿಸಿ, ಆಮಂತ್ರಿಸಿದರು.

# ಬಿಜೆಪಿ ನೂತನ ಜಿಲ್ಲಾಧ್ಯಕ್ಷರಿಗೆ ಸನ್ಮಾನ



ಉದಯರಶ್ಮಿ ನ್ಯೂಸ್

ವಿಜಯಪುರ: ಭಾರತೀಯ ಜನತಾ ಪಾರ್ಟಿ ವಿಜಯಪುರ ಜಿಲ್ಲಾ ಅಧ್ಯಕ್ಷರಾಗಿ ಆರ್. ಎಸ್. ಪಾಟೀಲ (ಕೂಚಬಾಳ) 2ನೇ ಬಾರಿ ಆಯ್ಕೆಯಾಗಿದ್ದಕ್ಕೆ ಬಿಜೆಪಿ ಯುವ ಮೋರ್ಚಾದಿಂದ ಸನ್ಮಾನಿಸಲಾಯಿತು.

ಈ ವೇಳೆಯಲ್ಲಿ ಬಸವರಾಜ್ ಹೂಗಾರ, ಶ್ರೀಕಾಂತ್ ಸಿಂಧಿ, ಪರಶುರಾಮ ಹೊಸಪೇಟೆ, ಶ್ರೀಧರ ಬಿಜ್ಜರಗಿ ಇನ್ನಿತರರು ಇದ್ದರು.

### ಇಂಗ್ಲೀಷ್ ಶಬ್ದಗಳಿವೆ ಗಮನಿಸಿ

# ಆದರ್ಶ ವಿದ್ಯಾಲಯ: ಅರ್ಜಿ ಆಹ್ವಾನ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ತಾಲೂಕಿನ ಬಿದರಕುಂದಿ ಗ್ರಾಮದಲ್ಲಿರುವ ಆದ-ರ್ಶ ವಿದ್ಯಾಲಯ (ಆರ್.ಎಮ್.ಎಸ್.ಎ.) ದಲ್ಲಿ 2024-25ನೇ ಸಾಲಿನ 6ನೇ ತರಗತಿಗೆ ಪ್ರವೇಶ ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಪಾಲಕರು ತಮ್ಮ ಮಕ್ಕಳ ಅರ್ಜಿಯನ್ನು ತಿತಿತಿ. ಛಿಣಂಟಜಜಣಭಿಚೆಣುಂಟಿ.ಇಚಿಡಿ. ಟುಭಿ.ಎಟಿ ಅಥವಾ ತಿತಿತಿ.ತುಜಥಿಚಿ-ತಚ್ಞುಟು.ಇಚಿಡಿಟಿಚೆಣಚೆಇಚಿ.ರಿಂತ. ಟಿ ವೆಬ್‌ಸೈಟ್ ಬಳಸಿ ದಿನಾಂಕ 17/01/2024 ರಿಂದ 06/02/2024 ರವರೆಗೆ ಸಲ್ಲಿಸಲು ಅವಕಾಶವಿರುತ್ತದೆ.

ತಮ್ಮ ಮಕ್ಕಳ ಅರ್ಜಿಗೆ ಸಂಬಂಧಿಸಿದ ಸಂದೇಶಗಳನ್ನು ಅರ್ಜಿಯಲ್ಲಿ ನೀಡಲಾದ ಮೋಬೈಲ್ ಸಂಖ್ಯೆಗೆ ಕಳುಹಿಸಲಾಗುವುದರಿಂದ ಪಾಲಕರು ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆ ನೀಡುವದು ಕಡ್ಡಾಯವಾಗಿದೆ.

ದಿನಾಂಕ 03/03/2024 ರಂದು ಬೆಳಿಗ್ಗೆ 10.30 ರಿಂದ 1.00 ಗಂಟೆಯವರೆಗೆ ಪ್ರವೇಶ ಪರೀಕ್ಷೆ ನಡೆಯಲಿದೆ. ಪರೀಕ್ಷೆಯಲ್ಲಿ 5ನೇ ತರಗತಿಗೆ ಸಂಬಂಧಿಸಿದ ಪಠ್ಯಾಧರಿಸಿ ಕನ್ನಡ-16, ಇಂಗ್ಲಿಷ್-16, ಗಣಿತ-16, ವಿಜ್ಞಾನ-16, ಸಮಾಜ ವಿಜ್ಞಾನ-16, ಸಾಮಾನ್ಯ ಜ್ಞಾನ-10 ಮತ್ತು ಬೌದ್ಧಿಕ ಸಾಮರ್ಥ್ಯ-10 ಒಟ್ಟು 100 ಅಂಕಗಳನ್ನು ನಿಗದಿಪಡಿಸಲಾಗಿರುತ್ತದೆ. ಪ್ರಶ್ನೆಪತ್ರಿಕೆ ವಸ್ತುನಿಷ್ಠ ಪ್ರಶ್ನೆಗಳನ್ನು ಒಳಗೊಂಡಿದ್ದು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಆದರ್ಶ ವಿದ್ಯಾಲಯದ ಮುಖ್ಯಗುರುಮಾತೆ ಶ್ರೀಮತಿ ಎನ್. ಬಿ. ತೆಗ್ಗಿನಮಠ ಮೋ. ಸಂಖ್ಯೆ 9632378058 ಅಥವಾ 9916727243 ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಕೆಪಿಸಿಸಿ ಮಹಿಳಾ ಕಾರ್ಯದರ್ಶಿಯಾಗಿ ಸ್ನೇಹಲತಾ



ಉದಯರಶ್ಮಿ ನ್ಯೂಸ್

ವಿಜಯಪುರ : ಕೆಪಿಸಿಸಿ ಮಹಿಳಾ ರಾಜ್ಯ ಕಾರ್ಯದರ್ಶಿಯಾಗಿ ಶ್ರೀಮತಿ ಸ್ನೇಹಲತಾ ಶೆಟ್ಟಿ ನೇಮಕಗೊಂಡಿದ್ದಾರೆ

ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ರಾಜ್ಯ ರಾಜ್ಯ ಕಾರ್ಯದರ್ಶಿಯಾಗಿ ಶ್ರೀಮತಿ ಸ್ನೇಹಲತಾ ಶೆಟ್ಟಿ ಇವರನ್ನು ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ನೆಟ್ಟ ಡಿಸೋಜ ಅವರ ಆದೇಶದ ಮೇರೆಗೆ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷರಾದ ಶ್ರೀಮತಿ ಡಾ. ಬಿ. ಪುಷ್ಪ ಅಮರ್ನಾಥ ಅವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ

ಇದಕ್ಕೆ ಸಹಕರಿಸಿದ ಅಖಿಲ ಭಾರತ ಕೆಪಿಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ ಉಪಮುಖ್ಯಮಂತ್ರಿಗಳಾದಂತಹ ಡಿ ಕೆ ಶಿವಕುಮಾರ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ ಬಿ ಪಾಟೀಲ, ಮತ್ತು ಸಚಿವರಾದ ಶಿವಾನಂದ ಪಾಟೀಲ, ಜಿಲ್ಲಾ ಎಲ್ಲಾ ಶಾಸಕರು ಮತ್ತು ಕಾರ್ಯಕರ್ತರು ಮತ್ತು ಗೀತಾಂಜಲಿ ಆರ್ ಪಾಟೀಲ, ರಾಜ್ಯ ಕೆಪಿಸಿಸಿ ಮಹಿಳಾ ಉಪಾಧ್ಯಕ್ಷರು, ಕಾಂಗ್ರೆಸ್ ಮುಖಂಡರು ಶುಭಾಶಯ ಕೋರಿದ್ದಾರೆ.

# ಅಭಿವೃದ್ಧಿಯ ಹೊಣೆ ಹೊತ್ತ ಹಳೆಯ ವಿದ್ಯಾರ್ಥಿಗಳ ಸಂಘ



ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಶಾಲಾ ಹಂತದಲ್ಲಿ ಅಭಿವೃದ್ಧಿ ಹಾಗೂ ನಿರ್ವಹಣೆಯ ಹೊಣೆ ಹೊತ್ತು ಮೂಲ ಸೌಕರ್ಯಗಳನ್ನು ಖಾತರಿಗೊಳಿಸುವುದರ ಜೊತೆ ಕಲಿಕೆಗೆ ಪೂರಕ ವಾತಾವರಣ ಕಟ್ಟಿ ಕೊಡಲು ಶ್ರಮಿಸುತ್ತಿರುವ ಹಳೆಯ ವಿದ್ಯಾರ್ಥಿಗಳ ಸಂಘದ ಕಾರ್ಯವು ನಾಡಿಗೆ ಮಾದರಿಯಾಗಿದೆ ಎಂದು ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲ ಸಚಿವ ಶಂಕರಗೌಡ ಸೋಮನಾಳ ಹೇಳಿದರು.

ತಾಲೂಕಿನ ಬಸರಕೋಡ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೆಲ್ಕೋ ಸೋಲಾರ ಪ್ರೈವೇಟ್ ಲಿಮಿಟೆಡ್, ನೆಕ್ಸ್ ಎಜ್ಯೂಕೇಷನ್ ಬೆಂಗಳೂರು ಇವರ ತಾಂತ್ರಿಕ ಜ್ಞಾನ ಹಾಗೂ ಮೆಂಡಾ ಫೌಂಡೇಷನ್ ಬೆಂಗಳೂರು, ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ಜಬುನ್ನೀಸಾ ಬೀಳಗಿ ಇವರ ಆರ್ಥಿಕ ನೆರವಿನೊಂದಿಗೆ ಸ್ಥಾಪಿತವಾದ ಸ್ಮಾರ್ಟ್ (ಡಿಜಿಟಲ್) ಕ್ಲಾಸ ಉದ್ಘಾಟಿಸಿ ಅವರು ಮಾತನಾಡಿದರು.

ಆಂಗ್ಲ ವ್ಯಾಮೋಹ ಹಾಗೂ ಖಾಸಗಿ ಶಾಲೆಗಳ ಹಾವಳಿಯಿಂದ ಮುಚ್ಚುವ ಹಂತ ತಲುಪಿರುವ ಸರ್ಕಾರಿ ಶಾಲೆ ಉಳಿಸಲು ನಡೆದ ಕ್ರಿಯಾತ್ಮಕ ನಡಿಗೆ ಸರ್ವ ಮಾನ್ಯವಾಗಲಿ. ದೇಶದ ಭವಿಷ್ಯವನ್ನು ತನ್ನ ಮಡಿಲಲ್ಲಿ ಹೊತ್ತಿರುವ ಸರ್ಕಾರಿ ಶಾಲೆಗಳ ಮಕ್ಕಳನ್ನು ದೇಶದ ಆಸ್ತಿಯನ್ನಾಗಿ ನಿರೂಪಿಸಲು ಅತ್ಯಾಧುನಿಕ ಸೌಲಭ್ಯಗಳ ಜೊತೆ ಗುಣಾತ್ಮಕ ತರಬೇತಿಗೆ ಸಜ್ಜುಗೊಳಿಸಿದ ರೀತಿ ಅನನ್ಯ ಎಂದರು.

ಜಿಲ್ಲಾ ಮಲೇರಿಯಾ ಅಧಿಕಾರಿ ಡಾ. ಜೇಬುನ್ನೀಸಾ ಬೀಳಗಿ, ಚಿಂತಕ ಅರವಿಂದ ಕೊಪ್ಪ, ಕ್ಷೇತ್ರ ಸಮನ್ವಯಾಧಿಕಾರಿ ಯು.ಬಿ ಧ-ರಿಕಾರ ಮಾತನಾಡಿ ಸರ್ಕಾರಿ ಶಾಲೆಯ ಬಗ್ಗೆ ಜಾಗೃತಿ ಮೂಡಿಸಿ, ಸಿಗುವ ಸೌಲಭ್ಯಗಳ ಬಗ್ಗೆ ತಿಳಿಹೇಳಿ, ಅತ್ಯಾಧುನಿಕ ತರಬೇತಿಯ ಭರವಸೆ ನೀಡುವ ಮೂಲಕ ಶಾಲೆ ಕಟ್ಟುವ ಸಂಕಲ್ಪ ತೊಟ್ಟು ಕಾರ್ಯಾಚರಣೆಗಿಳಿದ ಹಳೆಯ ವಿದ್ಯಾರ್ಥಿಗಳ ಚಳುವಳಿಯು ಅಸಾಧ್ಯವೆನ್ನುವುದನ್ನು ಸಾಧ್ಯವಾಗಿಸಿದ್ದು ಇಡೀ ಇಲಾಖೆ ಶಾಲೆಯ ಬಗ್ಗೆ ಅಭಿಮಾನ ಪಡುವಂತಾಗಿದೆ. ಮಕ್ಕಳು ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡು ಅಪ್ರತಿಮ ಸಾಧನೆ ಮಾಡಬೇಕು ಎಂದರು.

ವಿಶ್ರಾಂತ ಶಿಕ್ಷಕಿ ಜೋಡಬಿ ಬೀಳಗಿ, ವಿಶ್ರಾಂತ ವೈದ್ಯಾಧಿಕಾರಿ ಡಾ. ಎಸ್.ವಿ.ಒಡ್ಡೋಡಗಿ, ಎಸ್.ಡಿ.ಎಂ.ಸಿ ಉಪಾಧ್ಯಕ್ಷೆ ರಶ್ಮಿ ಕೊಪ್ಪ, ಶಿಕ್ಷಣ ಸಂಯೋಜಕ ಎಚ್.ಎ.ಮೇಟಿ, ಸೆಲ್ಕೋ ಸೋಲಾರನ ರಮೇಶ ಮತ್ತಿತರರು ಮಾತನಾಡಿದರು.

ಎಸ್.ಡಿ.ಎಂ.ಸಿ ಅಧ್ಯಕ್ಷ ಚಾಂದಬಾಷಾ ಮಾಳನೂರ ಅಧ್ಯಕ್ಷತೆ ವಹಿಸಿದ್ದರು. ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬಸವರಾಜ ಕಲ್ಲೂರ, ಕೋಶಾಧ್ಯಕ್ಷ ಮೋಹನಂದ ಬಾಗಲಕೋಟ, ಸಂಘಟನಾ ಕಾರ್ಯದರ್ಶಿ ಬಸವರಾಜ ಹಡಪದ, ಸೆಲ್ಕೋ ಸೋಲಾರ ಮಾರಾಟ ವ್ಯವಸ್ಥಾಪಕ ಬಸವರಾಜ ಕಲ್ಯಾಣಿ ಸೇರಿದಂತೆ ಮತ್ತೀತರರು ಇದ್ದರು.

ಇದೇ ಸಂದರ್ಭದಲ್ಲಿ ಡಿಜಿಟಲ್ ಕ್ಲಾಸ ಸ್ಥಾಪನೆಗೆ ಸಹಾಯ ನೀಡಿದ ಡಾ.ಜೇಬುನ್ನಿಸಾ ಬೀಳಗಿ, ಜೋಡಬಿ ಬೀಳಗಿ, ಸೆಲ್ಕೋ ಕಂಪನಿಯ ರಮೇಶ ಇವರನ್ನು ಹಳೆ ವಿದ್ಯಾರ್ಥಿಗಳ ಸಂಘದಿಂದ ಸನ್ಮಾನಿಸಿ ಗೌರವಿಸಲಾಯಿತು. ಎಸ್.ಜಿ.ಭದ್ರಗೊಂಡ ಸ್ವಾಗತಿಸಿದರು. ಸಿ.ಆರ್.ಪಿ ಅಮರೇಶ ಕಸಬೇಗೌಡರ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಿಕ್ಷಕ ಕುಮಾರಸ್ವಾಮಿ ಹಿರೇಮಠ ಕಾರ್ಯಕ್ರಮ ನಿರೂಪಿಸಿದರು. ಮಹಾದೇವಪ್ಪ ಮೇಟಿ ವಂದಿಸಿದರು.

# ಚಲನಚಿತ್ರೋತ್ಸವಕ್ಕೆ “ತುಷಾರ್” ಸಿನಿಮಾ ಆಯ್ಕೆ



ಉದಯರಶ್ಮಿ ನ್ಯೂಸ್

ಬಾಗಲಕೋಟೆ: ಬಾಗಲಕೋಟೆಯ ಸಿದ್ದನಕೊಳ್ಳದಲ್ಲಿ ಜನವರಿ 15 ಸೋಮವಾರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಜರುಗಿದ 2024 ನೇ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮಲಗೊಂಡ ಫಿಲಂ ಪ್ರೊಡಕ್ಷನ್ ಅಡಿಯಲ್ಲಿ ತಯಾರಾದ “ತುಷಾರ್” ಚಲನಚಿತ್ರ ನೋಡಿದ ಹಿರಿಯ ನಿರ್ದೇಶಕರು, ಕಲಾವಿದರು ಮತ್ತು ಆಯ್ಕೆ ಸಮಿತಿ “ತುಷಾರ್” ಚಿತ್ರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಚಲನಚಿತ್ರೋತ್ಸವದಲ್ಲಿ ಆಯ್ಕೆಯಾದ ತುಷಾರ್ ಚಲನಚಿತ್ರದ ನಟ ನಿರ್ದೇಶಕ ನಿರ್ಮಾಪಕ ವಿಶ್ವಪ್ರಕಾಶ ಟಿ ಮಲಗೊಂಡ ಅವ-ರಿಗೆ ಸಮಾರಂಭದಲ್ಲಿ ಅವಾರ್ಡ್ ನೀಡುವುದರ ಮುಖಾಂತರ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಿದ್ದನಕೊಳ್ಳ ಮಠದ ಡಾ.ಶಿವಕುಮಾರ ಸ್ವಾಮಿಗಳು, ಚಿತ್ರನಟ ಶೋಭರಾಜ್, ಕೆಜಿಎಫ್ ಸಿನಿಮಾ ಖ್ಯಾತಿಯ ಸಾಹಿತಿ ಹಾಗೂ ಚಿತ್ರ ನಿರ್ದೇಶಕ ಕಿನ್ನಾಳ ರಾಜ್, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ, ಕೆಪಿಸಿಸಿ ಸದಸ್ಯೆ ರಕ್ಷಿತಾ ಇಟಿ, ಗೋವಾದ ಉದ್ಯಮಿ ಸಿದ್ದಣ್ಣ ಮೇಟಿ, ನಟ ನಿರ್ದೇಶಕ ನಿರ್ಮಾಪಕ ಡಾ.ಪ್ರಭು ಗಂಜಿಹಾಳ, ಟಿವಿ ಧಾರಾವಾಹಿ ನಟ ನಟಿಯರು, ಸಿನಿಮಾ ನಿರ್ದೇಶಕರು, ಕಲಾವಿದರು ಪಾಲ್ಗೊಂಡಿದ್ದರು.

## ವ್ಯಕ್ತಿತ್ವ ವಿಕಸನ ಮಾಲೆ.. 33


# ಸಾಲುತಿಲ್ಲವೆ ನಿದ್ದೆ ಸಾಲುತಿಲ್ಲವೆ?

ಜಯ್ ನುಡಿ




● ಜಯಶ್ರೀ.ಜೆ.ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು, ಬೆಳಗಾವಿ
9449234142

ದಿಂಬಿಗೆ ತಲೆಯನ್ನು ಕೊಟ್ಟು ಅದೆಷ್ಟು ಪ್ರೀತಿಯಿಂದ ಕರೆದರೂ ಬಳಿ ಬಾರದೇ ಕಾಡುವ ನಿದ್ರಾ ರಾಣಿಯನ್ನು ಒತ್ತಾಯ ಪೂರ್ವಕವಾಗಿ ಮಾತ್ರೆಗಳ ಮೂಲಕ ಆಮಂತ್ರಿಸಿ ಸ್ವಲ್ಪ ಹೊತ್ತು ಮಾತ್ರ ಅವಳ ಬಳಿಯಿದ್ದು ಉಳಿದ ಹೊತ್ತು ನರಕಯಾತನೆ ಅನುಭವಿಸುವಂತೆ ಮಾಡುತ್ತಾಳೆ. ಕೆಲವರ ಬಾಳನ್ನು ಅಲ್ಲೋಲ ಕಲ್ಲೋಲ ಮಾಡಿ, ನಿತ್ಯದ ಕೆಲಸಗಳಲ್ಲಿ ಸೊಗಸಿಲ್ಲದಂತೆ ಮಾಡುತ್ತಾಳೆ. ಇನ್ನೂ ಕೆಲವರು ಕೇಳುವ ಮುನ್ನವೇ ತಾನೇ ಬಳಿ ಹೋಗಿ ತನ್ನ ತೋಳ ತೆಕ್ಕೆಯಲ್ಲಿ ಬಂಧಿಸಿ ಸುಖವಾದ ನಿದ್ದೆ ಕರುಣಿಸುತ್ತಾಳೆ. ಹಲವ-ರಿಗೆ ಎಲ್ಲಿ ಹೋದರೂ ಬೆನ್ನು ಹತ್ತಿ ಕಾಡಿ ನಿಂತಲ್ಲಿ ಕೂತಲ್ಲಿ ಆವರಿಸಿಕೊಂಡು ಜನರಿಂದ ನಿದ್ದೆ ಬಡುಕ/ಕಿ ಎಂಬ ಉಪಾದಿಯನ್ನು ಕೊಡಿಸುತ್ತಾಳೆ. ಇವಳು ಅತಿಯಾಗಿ ಬಳಿ ಬಂದರೂ ತೊಂದರೆ ಬಾರದಿದ್ದರೂ ತೊಂದರೆ. ಇಂದು ನಮಗೆಲ್ಲ ಜೀವನದಲ್ಲಿ ಒತ್ತಡ ಸಾಮಾನ್ಯವೆನಿಸುವಷ್ಟು ಸಾಮಾನ್ಯವಾಗಿದೆ.. ಹೀಗಾಗಿ ಅತೀ ಅವಶ್ಯವಾಗಿರುವ ನಿದ್ದೆಯೂ ಕಣ್ಣು ತುಂಬಿಕೊಳ್ಳದೇ ದುಬಾ-ರಿಯಾಗುತ್ತಿದೆ. ಎಷ್ಟು ನಿದ್ದೆ ಮಾಡಿದರೂ ಸುಖ ನಿದ್ದೆ ಮಾಯವಾಗಿ ಸಾಲುತ್ತಿಲ್ಲವೆ ನಿದ್ದೆ ಸಾಲುತಿಲ್ಲವೇ ಎನ್ನುವಂತಾಗಿದೆ. ಹಾಯಾದ ನಿದ್ದೆ ನಮ್ಮದಾಗಿದ್ದರೆ ಉತ್ತಮ ಆರೋಗ್ಯಕ್ಕೆ ಬೇಕಾಗಿರುವ ಹೃದಯ ಮತ್ತು ಹಾರ್ಮೋನುಗಳ ಕಾರ್ಯ ವೈಖರಿ ಉತ್ತಮ ರೀತಿಯಲ್ಲಿರುತ್ತದೆ.



ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ಪರ್ಧೆಯ ಹಿಂದೆ ಬಿದ್ದು ಇತರರಿಗಿಂತ ಮುಂದೆ ಬರಬೇಕೆಂಬ ಅತಿಯಾದ ಆಸೆಯಲ್ಲಿ ನಿದ್ದೆ ಕಡಿಮೆಗೊಳಿಸಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದೇವೆ. ಆಹಾರ ವ್ಯಾಯಾಮ ಮಾತ್ರ ಆರೋಗ್ಯಕ್ಕೆ ಸಹಕಾರಿ ಎಂದು ತಿಳಿದು ವಿಶ್ರಾಂತಿ ನಿದ್ದೆಯನ್ನು ಅಲಕ್ಷಿಸಿದರೆ ಆರೋಗ್ಯ ಹಾಳಾಗುವುದು ಖಂಡಿತ. ನಿದ್ದೆ ಸರಿಯಾಗದಿದ್ದರೆ ಯಾವ ಕೆಲಸದ ಮೇಲೂ ಏಕಾಗ್ರತೆಯನ್ನು ಸಾಧಿಸಲು ಸಾಧ್ಯವಿಲ್ಲ. ಅಷ್ಟೇ ಅಲ್ಲ. ನಿದ್ರಾ ಹೀನತೆಯಿಂದ ಉತ್ಸಾಹವಂತೂ ಕಮ್ಮಿಯಾಗುತ್ತದೆ ಅದರ ಜೊತೆಗೆ ನಮ್ಮ ಮೆದುಳಿನ ಚುರುಕುತನಕ್ಕೂ ಹೊಡೆತ ಬೀಳುತ್ತದೆ. ನಮ್ಮ ದೇಹದ ಅಂಗಾಂಗಗಳು ಮಾಡುವ ಕೆಲಸ ಒಂದೇ ಆದರೂ ನಾವು ಬಾಳುವ ರೀತಿ ನಮ್ಮ ಆಚಾರ ವಿಚಾರಗಳು ವಿಭಿನ್ನವಾಗಿವೆ. ಬದುಕಿನಲ್ಲಿ ಬರುವ ಸನ್ನಿವೇಶಗಳಿಗೆ ಆಲೋಚಿಸಿ ಸ್ಪಂದಿಸುವ ರೀತಿಯೂ ಭಿನ್ನವಾಗಿದೆ. ಹಾಗಾಗಿಯೇ ನಮ್ಮೆಲ್ಲರ ನಿದ್ದೆಯ ಪ್ರಮಾಣದಲ್ಲೂ ವ್ಯತ್ಯಾಸವಾಗುತ್ತಿದೆ. ಹಸುಗೂಸಿನ ನಿದ್ದೆ ನೋಡಲು ಸೊಗಸು. ಅಂಥ ನಿದ್ದೆ ನಮಗೆ ಬೇಕೆಂದು ಬಯಸುತ್ತೇವೆ.



ಕಾರಣಗಳು


ಹಿರಿಯರಿಗೆ ಮಕ್ಕಳ ಓದು ಮದುವೆ ಮನೆ ಖರ್ಚು ವೆಚ್ಚ ಕಛೇರಿಯಲ್ಲಿಯ ಕೆಲಸದ ಒತ್ತಡ. ಮಕ್ಕಳಿಗೆ ಹೆಚ್ಚು ಅಂಕ ಗಳಿಸುವ ಒತ್ತಡ, ಮಹಿಳೆಯರಿಗೆ ಮನೆಗೆಲಸ ಹಾಗೂ ಕುಟುಂಬ ನಿರ್ವಹಣೆಯ ಚಿಂತೆ ಹೀಗೆ ಏನೇನೋ ಚಿಂತೆಗಳನ್ನು ತಲೆಯಲ್ಲಿಟ್ಟುಕೊಂಡು ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡಿದ್ದ-ರಿಂದ ನಿದ್ರಾಹೀನತೆ ಉಂಟಾಗುತ್ತದೆ. ಮಧುಮೇಹ ರಕ್ತದೊತ್ತಡದಂಥ ಕಾಯಿಲೆಗಳಿಗೆ ದೇಹದಲ್ಲಿ ಜಾಗ ಕೊಟ್ಟು ನಿದ್ದೆಯನ್ನು ದೂರಗೊಳಿಸಿದ್ದೇವೆ. ಹೃದಯ ತೊಂದರೆಯಿದ್ದರೂ ನಿದ್ದೆ ಹತ್ತಿರ ಸುಳಿಯುವುದಿಲ್ಲ.ಎಂಬುದು ಸಂಶೋಧನೆಯಿಂದ ದೃಡಪಟ್ಟ ಅಂಶ.

ನಿದ್ದೆಗೆಟ್ಟು ಓದಬೇಕೆಂದು ಚಹ ಇಲ್ಲವೇ ಕಾಫಿಯ ಸೇವನೆ ವಿದ್ಯಾರ್ಥಿಗಳಲ್ಲಿ ಬಹು ವರ್ಷಗಳಿಂದ ನಡೆದು ಬಂದಿದೆ. ಇದು ನಿಜಕ್ಕೂ ಅನಾರೋಗ್ಯವನ್ನು ಆಹ್ವಾನಿಸಿದಂತೆಯೇ ಸರಿ. ಊಟಕ್ಕಿಂತಲೂ ಹೆಚ್ಚು ಚಹ ಕಾಫಿ ಹೀರುವ ಇಲ್ಲವೇ ಊಟವಾದ ಮೇಲೆ ಸಹ ಹೀರುವ ಚಟ ನಿದ್ರಾ ಹೀನತೆಗೆ ಕಾರಣವಾಗುತ್ತದೆ. ಊಟ ಮಾಡದೇ ಮಲಗುವುದು ಇಲ್ಲವೇ ಅತಿಯಾದ ಆಹಾರ ಸೇವನೆಯಿಂದ ಅಜೀರ್ಣ ಸಮಸ್ಯೆ. ಹಸಿವಿನಿಂದ ಬಳಲಿರುವುದು ಅಶಕ್ತತೆ ಮಾನಸಿಕ ನೋವು ಅತಿಯಾದ ದಣಿವು ತಲೆನೋವು ಸುಖ ನಿದ್ದೆಗೆ ವೈರಿಗಳಾಗಿವೆ ಆರೋಗ್ಯಕ್ಕೆ ಬೇಕಾದಷ್ಟು ಅವಧಿ ಮಾತ್ರ ನಿದ್ದೆ ಮಾಡಿ ಅತಿಯಾದ ನಿದ್ದೆಯಿಂದ ಸ್ಥೂಲ ಕಾಯಿಗಳಾಗಬಹುದು. ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗಬಹುದು. ಮನಸ್ಸು ಘಾಸಿಯಾಗುವ ಸಂಭವನೀಯತೆಯೂ ಹೆಚ್ಚು. ಮಲಗುವ ಕೋಣೆಯು ಅತಿಯಾಗಿ ತಣ್ಣಗಿದ್ದರೆ ಅಥ-ವಾ ಗಾಳಿಯಾಡದಿದ್ದರೂ ನಿದ್ದೆ ಬಾರದು. ನಿದ್ರಾಹೀನತೆಗೆ ಸೊಳ್ಳೆಗಳ ಕಾಟವನ್ನೂ ಲೆಕ್ಕಿಸಲೇಬೇಕು. ಒಟ್ಟಿನಲ್ಲಿ ಮಲಗುವ ಕೋಣೆಯು ನಿದ್ದೆಗೆ ಸಹಕಾರಿಯಾಗುವಂತಿರಬೇಕು. ನಿದ್ದೆ ಬರುವ ವಾತಾವರಣ-ಕ್ಕೆ ತೊಂದರೆಯಾಗದಿರುವ ಹಾಗೆ ಮಲಗುವ ಕೋಣೆ ಇದ್ದಾಗಲೂ ನಿದ್ದೆ ಬಾರದಿದ್ದರೆ ವೈದ್ಯರನ್ನು ಸಂಪರ್ಕಿಸಲೇಬೇಕು.



ವೈದ್ಯರ ಸಲಹೆ

ರಾತ್ರಿ ಲಘು ಆಹಾರ ಸೇವನೆ. ಉಂಡು ನೂರಡಿಯಿಡುವುದು.. ನಿದ್ದೆಗೆ ಜಾರುವ ಎರಡ್ಮೂರು ತಾಸುಗಳ ಮೊದಲೇ ಊಟ ಮಾಡುವುದು. ಮಲಗುವ ಮುನ್ನ ಒಳ್ಳೆಯ ಪುಸ್ತಕಗಳ ಓದು ಮನೆ ಮಂದಿಯೊಂದಿಗೆ ಹಾಸ್ಯಭರಿತ ಮಾತುಕತೆ ಸಂಗೀತ ಆಲಿಸುವಿಕೆ ಅಥವಾ ಉತ್ತಮ ಚಿಂತನೆಯ ಟಿವಿ ಕಾರ್ಯಕ್ರಮಗಳ ವೀಕ್ಷಣೆ ಮದ್ಯಾಹ್ನದ ಹೊತ್ತು ಅತಿ ನಿದ್ದೆಮಾಡಿದರೆ ರಾತ್ರಿ ನಿದ್ದೆ ಬಾರದು. ಅತಿಯಾದ ದುಡಿಮೆಯಿಂದ ದಣಿದಿದ್ದರೆ ಪ್ರವಾಸದ ಬಳಲಿಕೆಯಿದ್ದರೆ ಸ್ನಾನ ಮಾಡಿ ನಿದ್ದೆಗೆ ಜಾರುವುದು. ನಿದ್ದೆ ಬರುವ ಮುನ್ನವೇ ಹಾಸಿಗೆಯಲ್ಲಿ ಉರುಳಬೇಡಿ. ತೂಕಡಿಕೆಯಿಂದ ಕಣ್ಣು ಮುಚ್ಚುವಂತೆನಿಸಿದಾಗ ಮಲಗಿ. ನಿದ್ದೆಗೆ ಸಮಯ ನಿಗದಿ ಪಡಿಸಿ ಪ್ರತಿ ರಾತ್ರಿ ಅದೇ ಸಮಯಕ್ಕೆ ಮಲಗುವದು.. ಬೇಗ ಮಲಗಿ ಬೇಗ ಏಳಿ ನಿಯಮ ಪಾಲಿಸುವುದು. ಹೀಗೆ ವೈದ್ಯ-ರಿಂದ ಪಡೆದ ಸೂಕ್ತ ಸಲಹೆಗಳನ್ನು ಪಾಲಿಸಿ ನೆಮ್ಮದಿಯ ನಿದ್ದೆಯನ್ನು ಪಡೆಯಬಹುದು. ಮೈ ಮನಗಳನ್ನು ಉಲ್ಲಸಿತವಾಗಿಟ್ಟುಕೊಳ್ಳಬಹುದು.



# ಭಾರತದ ಆಧ್ಯಾತ್ಮಿಕ ಹರಿಕಾರ ವಿವೇಕಾನಂದ



**ಉದಯರಶ್ಮಿ ನ್ಯೂಸ್**

ವಿಜಯಪುರ: ಭಾರತ ಆಧ್ಯಾತ್ಮಿಕ ಶ್ರೇಷ್ಠತೆಯನ್ನು ಜಗತ್ತಿಗೆ ಸಾರಿದ್ದು ಸ್ವಾಮಿ ವಿವೇಕಾನಂದರು. ಇಂದಿನ ಯುವ ಜನತೆ ವಿವೇಕಾನಂದರ ಜೀವನ ಅರಿಯುವದರ ಜೊತೆಗೆ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ ಎಂದು ಬೊಮ್ಮನಹಳ್ಳಿ ಗವಿಮಠ ಗುರುಶಾಂತ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜಿಲ್ಲಾ ತಾಲೂಕು ಹಾಗೂ ನಗರ ಸಂಯುಕ್ತ ಘಟಕದ ಆಶ್ರಯದಲ್ಲಿ ನಡೆದ ಸ್ವಾಮಿ ವಿವೇಕಾನಂದರ ಕುರಿತು ಚಿಂತನಾಗೋಷ್ಠಿಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಮಸೂತಿ ಜಗದೀಶ್ವರ ಹಿರೇಮಠದ ಪ್ರಭು ಕುಮಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡುತ್ತಾ, ಸ್ವಾಮಿ ವಿವೇಕಾನಂದರು ಜಗತ್ತಿಗೆ ವಿಕಾಸ ಸಂದೇಶ ಸಾರಿದರು. ಅವರು ಚಿಕ್ಯಾಗೋದಲ್ಲಿ ಮಾಡಿದ ಭಾಷಣ ವಿಶ್ವ ಭ್ರಾತೃತ್ವವನ್ನು ಅವರ ವಿಚಾರ ಶ್ರೇಷ್ಠತೆಯನ್ನು ಸಾರುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಕೂಡ್ಗಿ ಸಹಕಾರ ಸಂಘದ ವ್ಯವಸ್ಥಾಪಕ ಸಂಗಮೇಶ ಬಿಜಾಪುರ ಮಾತನಾಡಿ, ವಿವೇಕಾನಂದರ ಜೀವನ ಸಂದೇಶವನ್ನು ಬಾಳಿನಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಹಸಿದವರ ಅಸಹಾಯಕರ ನಿರ್ಗತಿಕರ ಸೇವೆಯಲ್ಲಿ ದೇವರನ್ನು ಕಾಣಬೇಕು. ಅಮೇರಿಕಾ ದೇಶಕ್ಕೆ ವಿವೇಕಾನಂದರನ್ನು ಮೈಸೂರು ಒಡೆಯರು ಸಹಾಯ ಮಾಡಿದ್ದು ನಾಡಿನ ಹೆಮ್ಮೆ ವಿಷಯ ಎಂದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಶೋಭಾ ಹರಿಜನ ಅವರು, ಭಾರತವನ್ನು ಅರಿಯಬೇಕಾದರೆ ವಿವೇಕಾನಂದರವನ್ನು ಓದಿರಿ ಎಂದು ಹೇಳಿದ ಮಹಾತ್ಮ ಗಾಂಧೀಜಿ ಅವರ ನೆನಪಿಸಿಕೊಳ್ಳುತ್ತಾ ವಿವೇಕಾನಂದರ ಜನ್ಮದಿನಾಚರಣೆಯನ್ನು ಯುವ ಸಪ್ತಾಹವಾಗಿ ಆಚರಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಸಮಾಜ ಸೇವಕ ಇಮಾಮ್ ಜಾಫರ ಇನಾಮ್ದಾರ, ತಿಕೋಟಾ ಕಸಾಪ ಅಧ್ಯಕ್ಷ ಸಿದ್ದರಾಮಯ್ಯ ಲಕ್ಕುಂಡಿಮಠ, ಪದಾಧಿಕಾರಿಗಳಾದ ಕಮಲ ಮುರಾಳ, ಆಶಾ ಬಿರಾದಾರ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಉಪಸ್ಥಿತರಿದ್ದರು.

# ವಿಜಯಪುರ: ಜ.21 ರಿಂದ23ರವರೆಗೆ ಕೃಷಿ ಮೇಳ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕೃಷಿ ವಿಶ್ವವಿದ್ಯಾಲಯ, ಧಾರವಾಡ ವಿಜಯಪುರ ಆವರಣ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಸಹಯೋಗದಲ್ಲಿ ಜನವರಿ 21 ರಿಂದ 23ರವರೆಗೆ ವಿಜಯಪುರ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ 'ಸುಸ್ಥಿರ ಕೃಷಿಗಾಗಿ ಬರ ನಿರ್ವಹಣೆ' ಕೃಷಿ ಮೇಳ-2023-24 ಹಮ್ಮಿಕೊಳ್ಳಲಾಗಿದೆ.

ಜನವರಿ 21 ರಂದು ಬೆಳಿಗ್ಗೆ 11 ಗಂಟೆಗೆ ಕೃಷಿ ಸಚಿವರಾದ ಎನ್.ಚೆಲುವರಾಯಸ್ವಾಮಿ ಕೃಷಿ ಮೇಳವನ್ನು ಉದ್ಘಾಟಿಸಲಿದ್ದಾರೆ. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಕೃಷಿ ವಸ್ತು ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. ಜವಳಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಕೃಷಿ ಪ್ರಕಟಣೆಗಳನ್ನು ಬಿಡುಗಡೆಗೊಳಿಸಲಿದ್ದಾರೆ.

ನಾಗಠಾಣ ಶಾಸಕರಾದ ವಿಠ್ಠಲ ಕಟದೊಂಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ನವದೆಹಲಿ ವಿಶೇಷ ಪ್ರತಿನಿಧಿ-2 ಪ್ರಕಾಶ ಹುಕ್ಕೇರಿ, ಸಂಸದರಾದ ರಮೇಶ ಜಿಗಜಿಣಗಿ, ಶಾಸಕರುಗಳಾದ ಯಶವಂತರಾಯಗೌಡ ಪಾಟೀಲ, ಬಸನಗೌಡ ಆರ್.ಪಾಟೀಲ ಯತ್ನಾಳ, ಹಣಮಂತ ನಿರಾಣಿ, ಪ್ರಕಾಶ ರಾಠೋಡ, ಸುನೀಲಗೌಡ ಪಾಟೀಲ, ಪಿ.ಎಚ್.ಪೂಜಾರ, ಅಪ್ಪಾಜಿ ಸಿ.ಎಸ್.ನಾಡಗೌಡ, ಭೀಮನಗೌಡ (ರಾಜುಗೌಡ) ಬಸನಗೌಡ ಪಾಟೀಲ, ಅಶೋಕ ಮನಗೂಳಿ ಹಿಟ್ಟಿನಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ರವಿಕುಮಾರ ಸಾಬು ಕಡಿಮನಿ ಅವರು ಭಾಗವಹಿಸಲಿದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಪಿ.ಎಲ್.ಪಾಟೀಲ ಅವರು ಗೌರವ ಉಪಸ್ಥಿತರಿರಲಿದ್ದಾರೆ.

ಸಮಾರೋಪ ಸಮಾರಂಭ : ಜ.23ರಂದು ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ಜರುಗಲಿದ್ದು, ನಾಗಠಾಣ ಶಾಸಕರಾದ ವಿಠ್ಠಲ ಕಟದೊಂಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಪಿ.ಎಲ್.ಪಾಟೀಲ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮಗಳ ವಿವರ: ಜನವರಿ 21 ರಂದು ಮಧ್ಯಾಹ್ನ 2 ಗಂಟೆಯಿಂದ ಹವಾಮಾನ ವೈಪರಿತ್ಯದ ಪರಿಣಾಮಗಳು ಮತ್ತು ನಿರ್ವಹಣೆ, ಬರ ನಿರ್ವಹಣೆಗಗಿ ಕೃಷಿ ತಂತ್ರಜ್ಞಾನಗಳು, ರೈತರಿಂದ ರೈತರಿಗೆ ಕಾರ್ಯಕ್ರಮ-ಪ್ರಶಸ್ತಿ ವಿಜೇತ ರೈತರಿಂದ ಅನುಭವ ಹಂಚಿಕೆ, ಕಾರ್ಯಕ್ರಮಗಳು ನಡೆಯಲಿವೆ.

ಜನವರಿ 22 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ಸಾವಯವ ಮತ್ತು ನೈಸರ್ಗಿಕ ಕೃಷಿ, ರೈತರಿಂದ ರೈತರಿಗೆ ಕಾರ್ಯಕ್ರಮ--ಪ್ರಶಸ್ತಿ ವಿಜೇತ ರೈತರಿಂದ ಅನುಭವ ಹಂಚಿಕೆ, ಕಾರ್ಯಕ್ರಮಗಳು ಹಾಗೂ ಜನವರಿ 23 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ಸುಸ್ಥಿರ ಕೃಷಿಗಾಗಿ ಉಪ ಕಸುಬುಗಳು, -ಪ್ರಶಸ್ತಿ ವಿಜೇತ ರೈತರಿಂದ ಅನುಭವ ಹಂಚಿಕೆ, ಕಾರ್ಯಕ್ರಮಗಳು ನಡೆಯಲಿವೆ.

# ತಾಯಿ-ಮಗು ಕಾಣೆ :ದೂರು ದಾಖಲು

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ತಾಲೂಕಿನ ಆಲಕೊಪ್ಪರ ಗ್ರಾಮದ ಶಾರದಾ ಬೆಲ್ಲದ ತನ್ನ 8 ವರ್ಷದ ಮಗಳು ಅಶ್ವಿನಿ ಬೆಲ್ಲದ ಇವಳನ್ನು ಕರೆದುಕೊಂಡು ಮುದ್ದೇಬಿಹಾಳದ ಸಂತೆಗೆ ಹೋಗಿ ಬರುವದಾಗಿ ಹೇಳಿ ಹೋಗಿದ್ದು ಮರಳಿ ಮನೆಗೆ ಬಾರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾರೆ ಅಂತಾ ಶಾರದಾಳ ಪತಿ ನಿಂಬೆಣ್ಣ ಬೆಲ್ಲದ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಫಿರ್ಯಾದು ನೀಡಿದ್ದು, ಪ್ರಕರಣ ದಾಖಲಾಗಿದೆ.

# ಸವದತ್ತಿ ಯಲ್ಲಮ್ಮದೇವಿ ಜಾತ್ರೆಗೆ ವಿಶೇಷ ಸಾರಿಗೆ ವ್ಯವಸ್ಥೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಪ್ರತಿ ವರ್ಷದಂತೆ ಈ ವರ್ಷವೂ ಜನವರಿ 23 ರಿಂದ 26ರವರೆಗೆ ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ಜರುಗುವ ಶ್ರೀ ಯಲ್ಲಮ್ಮದೇವಿ ಜಾತ್ರೆ ಹಾಗೂ ಜ.24 ರಿಂದ 30ರವರೆಗೆ ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಜರುಗುವ ಶ್ರೀ ಬನಶಂಕರಿದೇವಿ ಜಾತ್ರೆಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪುರ ವಿಭಾಗಗಳಿಂದ ವಿಶೇಷ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.

ಜಾತ್ರೆಗೆ ತೆರಳುವ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸಲು ನಿಗಮದ ವಿಜಯಪುರ ವಿಭಾಗದ ಕೇಂದ್ರ ಬಸ್ ನಿಲ್ದಾಣ, ಇಂಡಿ, ಸಿಂದಗಿ, ಮುದ್ದೇಬಿಹಾಳ, ತಾಳಿಕೋಟಿ, ಬಸವನಬಾಗೇವಾಡಿ ಹಾಗೂ ನಿಡಗುಂದಿ ಬಸ್ ನಿಲ್ದಾಣಗಳಿಂದ ವಿಶೇಷ ಸಾರಿಗೆಗಳ ಕಾರ್ಯಾಚರಣೆ ಮಾಡಲಾಗುವುದು. ಪ್ರಯಾಣಿಕರು ಇಚ್ಛಿಸಿದಲ್ಲಿ ಕರಾರು ಒಪ್ಪಂದದ ಮೇಲೆಯೂ ಸಹ ಸದರಿ ಜಾತ್ರೆಗೆ ಬಸ್ಸಗಳನ್ನು ಒದಗಿಸಲಾಗುವುದು.

ಪ್ರಯಾಣಿಕರು ಸಾರಿಗೆ ಸೌಲಭ್ಯಕ್ಕಾಗಿ ಹಾಗೂ ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಘಟಕ ವ್ಯವಸ್ಥಾಪಕರು ವಿಜಯಪುರ ಘಟಕ-1 ಮೊ: 7760992263, ಘಟಕ-2 ಮೊ: 7760992264, ಇಂಡಿ ಮೊ: 7760992265, ಸಿಂದಗಿ ಮೊ: 7760992266, ಮುದ್ದೇಬಿಹಾಳ ಮೊ: 7760992267, ತಾಳಿಕೋಟೆ ಮೊ: 7760992268, ಬಸವನಬಾಗೇವಾಡಿ ಮೊ: 7760992269, ಕೇಂದ್ರ ಬಸ್ ನಿಲ್ದಾಣ ವಿಜಯಪುರ ಮೊ: 7760992258 ಹಾಗೂ ದೂ:08352-251344 ಸಂಖ್ಯೆಗೆ ಸಂಪರ್ಕಿಸುವಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂಡಿ ಆದರ್ಶ ವಿದ್ಯಾಲಯ ಪ್ರವೇಶಕ್ಕೆ ಅರ್ಜಿ ಅಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: 2024-25 ನೇ ಸಾಲಿಗೆ ಸರಕಾರಿ ಆದರ್ಶ ವಿದ್ಯಾಲಯ ಇಂಡಿ ಶಾಲೆಗೆ ಆರನೇ ತರಗತಿ ದಾಖಲಾತಿಗಾಗಿ ನಡೆಸುವ ಪ್ರವೇಶ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

2023-24 ನೇ ಸಾಲಿನಲ್ಲಿ ಇಂಡಿ ತಾಲೂಕಿನ ಸರಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಹಾಗೂ ಇದೇ ತಾಲೂಕಿನ ಖಾಯಂ ನಿವಾಸಿಗಳ ಮಕ್ಕಳು, ಬೇರೆ ತಾಲೂಕು, ಜಿಲ್ಲೆ , ರಾಜ್ಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿಗಳನ್ನು ಜನೇವರಿ 17 ರಿಂದ ಪೇಬ್ರುವರಿ 6 ರವರೆಗೆ ಸಲ್ಲಿಸಬಹುದು. ಪ್ರವೇಶ ಪರೀಕ್ಷೆ ಮಾರ್ಚ 3ರಂದು ನಡೆಯುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಎಸ್ ಆಲಗೂರ ಹಾಗೂ ಮುಖ್ಯೋಪಾಧ್ಯಾಯ ಎಸ್.ಜಿ.ಬನಸೋಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆನ್‌ಲೈನ್‌ನಲ್ಲಿ ಅರ್ಜಿಗಳನ್ನು www.schooleducation.kar.nic.in, www.vidyavahini.karnataka.gov.in ವೆಬ್ ಸೈಟ್‌ನಲ್ಲಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ಬೇಕಾಗುವ ದಾಖಲೆಗಳು: ಎ□□□ಟಿಎಸ್ ನಂಬರ, ವಿದ್ಯಾರ್ಥಿಯ ಇತ್ತೀಚಿನ ಪಾಸ್‌ಪೋರ್ಟ ಸೈಜಿನ ಭಾವಚಿತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಿದ್ಯಾರ್ಥಿಯ ಆಧಾರಕಾರ್ಡ, ವಿದ್ಯಾರ್ಥಿಯ ವ್ಯಾಸಂಗ ಪ್ರಮಾಣ ಪತ್ರ (ಬೇರೆ ತಾಲೂಕು, ಜಿಲ್ಲೆ, ರಾಜ್ಯಗಳಲ್ಲಿ ಓದುತ್ತಿರುವ ಮಕ್ಕಳಿಗೆ ಮಾತ್ರ), ವಾಸಸ್ಥಳ ದೃಢೀಕರಣ ಪತ್ರ (ಬೇರೆ ತಾಲೂಕು, ಜಿಲ್ಲೆ, ರಾಜ್ಯಗಳಲ್ಲಿ ಓದುತ್ತಿರುವ ಮಕ್ಕಳಿಗೆ ಮಾತ್ರ), ವಿಶೇಷ ಅಗತ್ಯವುಳ್ಳ ಮಕ್ಕಳ ವೈದ್ಯಕೀಯ ಪ್ರಮಾಣ ಪತ್ರ, ಪಾಲಕರು ತಮ್ಮ ಚಾಲ್ತಿ ಸ್ವಂತ ಮೋಬೈಲ್ ಸಂಖ್ಯೆಯನ್ನು ಅರ್ಜಿಯಲ್ಲಿ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಮುಖ್ಯೋಪಾಧ್ಯಾಯ ಆದರ್ಶ ವಿದ್ಯಾಲಯ ಇಂಡಿ 8970716054, 6360904885 ಈ ಸಂಖ್ಯೆಗಳನ್ನು ಸಂಪರ್ಕಿಸಬಹುದು.

# ಗಣರಾಜ್ಯೋತ್ಸವ ಅದ್ದೂರಿ ಆಚರಣೆಗೆ ತೀರ್ಮಾನ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಪಟ್ಟಣದ ತಹಶೀಲ್ದಾರ ಕಾರ್ಯಾಲಯದಲ್ಲಿ ಮಹಾಯೋಗಿ ವೇಮನ ಜಯಂತಿ, ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಹಾಗೂ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಪೂರ್ವಭಾವಿ ಸಭೆ ಜರುಗಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬಲರಾಮ ಕಟ್ಟಿಮನಿ ಅವರು ಮಾತನಾಡಿ, ಜ.19 ರಂದು ಮಹಾಯೋಗಿ ವೇಮರ ಮತ್ತು ಜ.21 ರಂದು ಅಂಬಿಗರ ಚೌಡಯ್ಯನವರ ಜಯಂತಿಯನ್ನು ಎಲ್ಲ ಕಚೇರಿ ಹಾಗೂ ಶಾಲಾ-ಕಾಲೇಜುಗಳಲ್ಲಿ ಆಚರಿಸಬೇಕು. ಜ.21 ರಂದು ಪಟ್ಟಣದ ತಂಗಡಗಿ ರಸ್ತೆಯಲ್ಲಿರುವ ಚೌಡಯ್ಯನವರ ವೃತ್ತದಲ್ಲಿ ಸಮಾಜ ಬಾಂಧವರೊಂದಿಗೆ ಪೂಜೆ ಸಲ್ಲಿಸುವದಾಗಿ ತಿಳಿಸಿದರು. ಎರಡೂ ಜಯಂತಿಯ ಆಚರಣೆ ಬಳಿಕ ತಾಲೂಕು ಮಟ್ಟದ ಅಧಿಕಾರಿಗಳು ತಹಶೀಲ್ದಾರ ಕಚೇರಿಯಲ್ಲಿ ನಡೆಯುವ ಆಚರಣೆಯಲ್ಲಿ ಹಾಜರಿರುವಂತೆ ಸೂಚಿಸಿದರು.

ಜ.26 ರಂದು 75 ನೇ ಗಣರಾಜ್ಯೋತ್ಸವವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿರುವದಾಗಿ ತಿಳಿಸಿದರು. ಎಲ್ಲ ಪಂಚಾಯತಿಗಳು, ಕಚೇರಿಗಳು ಸೇರಿದಂತೆ ಶಾಲಾ-ಕಾಲೇಜುಗಳಲ್ಲಿ ಗಣರಾಜ್ಯೋತ್ಸವವನ್ನು ಕಡ್ಡಾಯವಾಗಿ ಅಚರಿಸತಕ್ಕದ್ದು. ಪಥಸಂಚಲನ, ಶಾಲಾ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿಶೇಶವಾಗಿಸುವಂತೆ ಸೂಚಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಮೇಶ ಲಮಾಣಿ, ತಾಲೂಕು ಪಂಚಾಯತ ನ ಖೂಬಾಸಿಂಗ ಜಾಧವ, ಬಿಇಓ ಬಸವರಾಜ ಸಾವಳಗಿ, ಆರ್.ಎಫ್.ಓ ಎಸ್.ಜಿ.ಸಂಗಾಲಕ ಮುಖಂಡರಾದ ಎಚ್.ಆರ್.ಬಾಗವಾನ, ಚಂದ್ರಶೇಖರ ಅಂಬಿಗೇರ, ಸಂದೀಪ ಬಿದರಕೋಟಿ, ಶಿವಪ್ಪ ಚಿಮ್ಮಲಗಿ, ಸಂಗಪ್ಪ ಪ್ಯಾಟಿ, ಅಯ್ಯಪ್ಪ ತಂಗಡಗಿ, ಆನಂದ ಅಸ್ಕಿ, ಭೀಮಣ್ಣ ಹಿರೇ ಅಂಬಿಗೇರ, ಸುರೇಶ ವಾಲಿಕಾರ, ವಿಶ್ವನಾಥ ಅಂಬಿಗೇರ ಸೇರಿದಂತೆ ಮತ್ತಿತರರು ಇದ್ದರು. ಶಿಕ್ಷಕ ಟಿ.ಡಿ.ಲಮಾಣಿ ನಿರ್ವಹಿಸಿದರು.

ಮಹನೀಯರ ಜಯಂತಿಯ ಪೂರ್ವಭಾವಿ ಸಭೆಗಳಿಗೆ ತಾಲೂಕು ಮಟ್ಟದ ಎಲ್ಲ ಅಧಿಕಾರಿಗಳು ಭಾಗವಹಿಸುತ್ತಿಲ್ಲ. ಇನ್ನು ಮುಂದೆ ಜರುಗುವ ಪೂರ್ವಭಾವಿ ಸಭೆಗಳಿಗೆ ಗೈರಾದಲ್ಲಿ ಜಿಲ್ಲಾಧಿಕಾರಿಗಳಲ್ಲಿ ದೂರುವದಾಗಿ ತಹಶೀಲ್ದಾರ ಬಲರಾಮ ಕಟ್ಟೀಮನಿ ಎಚ್ಚರಿಸಿದರು.

## ಕಾವ್ಯರಶ್ಮಿ

– –ಲತಾ ಪ್ರಸಾದ
("ನಮ್ಮ ಕಥಾ ಅರಮನೆ" ಬರಹಗಾರರು)




### ಹೊಂಗಿರಣ

ಬಾನಲಿ ಮೂಡಿಹ ಸುಂದರ ನೇಸರ
ಕಳೆಯುವ ಮನದಿ ತುಂಬಿಹ ಬೇಸರ
ತನು-ಮನದಿ ಚೈತನ್ಯದ ಸಂಚಾರ
ಪ್ರಕೃತಿಗೆ ಭಾನುವಿನ ಕಿರಣದ ಹಾರ

ಕರಗುತಿದೆ ಇಬ್ಬನಿಯ ಮುತ್ತಿನ ತೋರಣ
ಬೆಳಗಿದು ಸುಂದರ, ಸವಿಯ ಹೂರಣ
ಭುವಿಯ ತುಂಬಾ ಚೆಲ್ಲಿದೆ ಹೊಂಗಿರಣ
ಕೆಂಪು ಚೆಲ್ಲಿ ಬಣ್ಣವಾಗಿದೆ ಮೂಡಣ

ನೇಸರನುದಯದಿ ನಾಚಿ ನೀರಾದ ಭುವಿ
ಸಕಲ ಜೀವರಾಶಿಗೂ ಈ ಬೆಳಗು ಸವಿ
ಝೇಂಕರಿಸುತಿದೆ ಸುಪ್ರಭಾತದ ಪಲ್ಲವಿ
ಅರುಣೋದಯವ ನೋಡಿ ಆದೆ ಕವಿ



## ಭಾವರಶ್ಮಿ



– –ಗಣೇಶ್ ಜಗನ್ನಾಥ್
("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

### ಪಶ್ಚಾತಾಪ

ಸುಮಿತ್ರಾ ಕಂಪನಿಯ ಉದ್ಯೋಗಿ. ಒಳ್ಳೆಯ ಕೆಲಸ, 22ರ ತಾರುಣ್ಯ, ರೂಪವತಿ, ಬುದ್ಧಿವಂತೆ. ಇನ್ನೇನು ಬೇಕು ಒಂದು ಹೆಣ್ಣಿಗೆ. ಇವೆಲ್ಲರ ಜತೆಗೆ ಸ್ವಲ್ಪ ಅಹಂಕಾರವೂ ಸೇರಿತ್ತು.

ಅದೇ ಕಂಪನಿಯ ಉದ್ಯೋಗಿ ಸುರೇಶ. ಬುದ್ಧಿವಂತ ಮತ್ತು ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ. ಆತ ಸುಮಿತ್ರಾಳಿಗೆ ವಿವಾಹವಾಗುವ ಇಂಗಿತ ವ್ಯಕ್ತಪಡಿಸಿದ. ಸುಮಿತ್ರಾ ನಿರಾಕರಿಸಿದಳು. ಕಾರಣ ಸುರೇಶನಿಗಿರುವ ತಂಗಿ. ಎಲ್ಲಿ ಆಕೆಯ ಮದುವೆಯ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕಾಗುವುದೋ ಎಂದು. ಸುರೇಶ ಬೇಸರ ಪಡಲಿಲ್ಲ. ಸುಮಿತ್ರಾಳ ಜತೆ ಸ್ನೇಹಿತನಾಗಿಯೇ ಮುಂದುವರೆದ.

ಕಂಪನಿಯ ಶಾಖೆಯೊಂದು ವಿದೇಶದಲ್ಲಿ ತೆರೆಯಿತು. ಸುರೇಶನನ್ನು ತಾತ್ಕಾಲಿಕವಾಗಿ ಅಲ್ಲಿಗೆ ವರ್ಗಾಯಿಸಿದರು.

ಸುಮಿತ್ರಾಳಿಗೆ ಹಲವು ಮದುವೆಯ ಪ್ರಸ್ತಾವನೆಗಳು ಬಂದವು. ಜವಾಬ್ದಾರಿಯ ದೆಸೆಯಿಂದ ಹಲವನ್ನು ತಿರಸ್ಕರಿಸಿ ಕೊನೆಗೆ ಒಬ್ಬನನ್ನು ಆರಿಸಿದಳು. ಆತನಿಗೆ ಹೆತ್ತವರು, ಒಡಹುಟ್ಟಿದವರು, ಹತ್ತಿರದ ಸಂಬಂಧಿಗಳು ಯಾರೂ ಇಲ್ಲ. ಸ್ವಲ್ಪ ಮುಂಗೋಪಿ. ಮದುವೆಯಾಗಿ ಆತ ಮನೆ ಅಳಿಯನಾದ.

ಮದುವೆಯಾದ ವರುಷದಲ್ಲೇ ಸುಮಿತ್ರಾ ಹೆಣ್ಣು ಮಗುವಿನ ತಾಯಿಯದಳು. ಈ ಮದ್ಯೆ ಮನೆಯಲ್ಲಿ ಮನಸ್ತಾಪ ಹೆಚ್ಚಾಯಿತು. ಸುಮಿತ್ರಾಳ ಅಹಂ ಆಕೆಯನ್ನು ಸೋಲಗೊಡುತಿರಲಿಲ್ಲ.

ಮಳೆಗಾಲದ ಒಂದು ರಾತ್ರಿ ಜಗಳ ತಾರಾಕ್ಕಕೆ ಏರಿ ಮುಂಗೋಪಿಯಾದ ಅವನು ಮಗುವನ್ನು ಎತ್ತಿಕೊಂಡು ಹೊರನಡೆದನು. ಕೋಪ ಇಳಿದಮೇಲೆ ಆತ ಮರಳಿ ಬರುವನೆಂದು ತಿಳಿದಳು. ದಿನ ಕಳೆಯಿತು, ವಾರ ತಿಂಗಳು ವರುಷಗಳು ಕಳೆದವು. ಗಂಡ ತಿರುಗಿ ಬರಲೇಇಲ್ಲ. ಹುಡುಕಿಸಲು ಪ್ರಯತ್ನಿಸಿದಳು. ಪಲಕಾರಿಯಾಗಲಿಲ್ಲ.





ಮರ್ಯಾದೆಗೆ ಅಂಜಿ ಪೊಲೀಸ್‌ನಲ್ಲೂ ದೂರು ದಾಖಲಿಸಲಿಲ್ಲ.

ಹಲವು ವರುಷಗಳ ನಂತರ ಸುರೇಶ ಕಂಪನಿಗೆ ವಾಪಾಸ್ಸಾಗುತ್ತಾನೆ. ಒಂದು ದಿನ ತನ್ನ ಸಹೋದ್ಯೋಗಿಗಳನ್ನೆಲ್ಲ ತನ್ನ ಮನೆಗೆ ಆಹ್ವಾನಿಸುತ್ತಾನೆ. ಎಲ್ಲರ ಜತೆಯಲ್ಲಿ ಸುಮಿತ್ರಾಳೂ ಹೋಗುತ್ತಾಳೆ. ಸುಂದರವಾದ ಮನೆ, ಹೆತ್ತವರು, ಹೆಂಡತಿ ಮತ್ತು ಮಗ. ಸುರೇಶನ ತಂಗಿಗೆ ಮದುವೆಯಾಗಿ ಮುಂಬೈನಲ್ಲಿ ಇರುತ್ತಾಳೆ.

ಪಾರ್ಟಿ ಮುಗಿದ ನಂತರ ಸುಮಿತ್ರಾ ಮನೆಗೆ ಬರುತ್ತಾಳೆ. ಮನದಲ್ಲಿ ಏನೋ ತಳಮಳ.

ವರುಷಗಳು ಉರುಳುತ್ತವೆ. 50ರ ಹರೆಯದ ಸುಮಿತ್ರಾ ಈಗ ಕಂಪನಿಯಲ್ಲಿ ಮ್ಯಾನೇಜರ್. ಒಂದು ದಿನ ಆಕೆಯ ವಿಳಾಸಕ್ಕೆ ಒಂದು ಲಗ್ನ ಪತ್ರಿಕೆ. ತೆರೆದು ಓದುತ್ತಾಳೆ. ತನ್ನ ಮಗಳ ಮದುವೆ. ಗಂಡನಿಂದ ಅಹ್ವಾನ. ತಳಮಳ, ಹಂಬಲ, ಮದುವೆಗೆ ಹೋಗೋಣವೆಂದು. ಆದರೆ ವಿಧಿಯ ಆಟವೇ ಬೇರೆ. ಮದುವೆಯಾಗಿ ವಾರದ ನಂತರ ಪತ್ರಿಕೆ ಇವಳ ಕೈ ಸೇರಿರುತ್ತದೆ. ಮುಂದೆ ಗಂಡ ಮತ್ತು ಮಗಳನ್ನು ನೋಡುವ ಮನಸಾಗುವುದಿಲ್ಲ.

ಸುಮಿತ್ರಾ ಮನೆಯ ಬಾಲ್ಕನಿಯಲ್ಲಿ ಕುಳಿತು ಯೋಚಿಸುತ್ತಾಳೆ. ತನ್ನ ಬಾಳಿನಲ್ಲಿ ನಡೆಯಲು ಬೇರೇನೂ ಉಳಿದಿಲ್ಲವೆಂದು ನಿಟ್ಟುಸಿರು ಬಿಡುತ್ತಾಳೆ.

# ವ್ಯಕ್ತಿ ಕಾಣೆ: ಪತ್ತೆಗೆ ಮನವಿ

**ಉದಯರಶ್ಮಿ ನ್ಯೂಸ್**



ವಿಜಯಪುರ: ವಿಜಯಪುರ ತಾಲೂಕಿನ ಹೊನ್ನುಟಗಿ ಗ್ರಾಮದ 55 ವರ್ಷದ ಪ್ರಕಾಶ ಸಂಗಪ್ಪ ಚೂರಿ ಎಂಬ ವ್ಯಕ್ತಿ ದಿನಾಂಕ : 04-05-2023 ರಿಂದ ಹೊನ್ನುಟಗಿಯಿಂದ ಕಾಣೆಯಾಗಿರುವ ಕುರಿತು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾಣೆಯಾದ ವ್ಯಕ್ತಿ ಪತ್ತೆಗೆ ಠಾಣೆಯ ಪೊಲೀಸ್ ಇನ್ಸಪೆಕ್ಟರ್ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಕಾಣೆಯಾಗಿರುವ ವ್ಯಕ್ತಿಯು 5.8 ಎತ್ತರ, ಸಾಧಾರಣ ಮೈಕಟ್ಟು, ಕಪ್ಪು ಬಣ್ಣ ಕೋಲುಮುಖ, ಉದ್ದ ಮೂಗು, ಕುರುಚಲು ಗಡ್ಡ ಬಿಟ್ಟಿದ್ದು, ಕನ್ನಡ ಹಾಗೂ ಹಿಂದಿ ಭಾಷೆ ಬಲ್ಲವನಾಗಿದ್ದು, ಕಾಣೆಯಾದ ಸಂದರ್ಭದಲ್ಲಿ ಬಿಳಿ ಬಣ್ಣದ ಟೀ ಶರ್ಟ ಹಾಗೂ ಚಾಕಲೇಟ್ ಬಣ್ಣದ ಪ್ಯಾಂಟ್ ಧರಿಸಿದ್ದನು. ಈ ಚಹರೆಪಟ್ಟಿಯುಳ್ಳ ವ್ಯಕ್ತಿ ಪತ್ತೆಯಾದಲ್ಲಿ ಸಾರ್ವಜನಿಕರು ಪೊಲೀಸ್ ಅಧೀಕ್ಷಕರು ದೂ: 08352-250152, ಜಿಲ್ಲಾ ನಿಸ್ತಂತು ಕಚೇರಿ ದೂ: 08352-250844, ವಿಜಯಪುರ ಗ್ರಾಮೀಣ ಠಾಣೆ ದೂ: 08352-250923 ಸಂಖ್ಯೆಗೆ ಮಾಹಿತಿ ನೀಡುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.